ವರದಿ – 1
Report - 1

# ಕರ್ನಾಟಕ ಕೃಷಿ ಬೆಲೆ ಆಯೋಗ

**(*Karnataka Agriculture Price Commission*)**

**ಆದೇಶ ಸಂಖ್ಯೆ: ಕೃಇ61ಕೃಎಇ2013, ಬೆಂಗಳೂರು, ದಿ: 31/01/2014**

# “ಅನ್ನಭಾಗ್ಯದಿಂದ ಸುಸ್ಥಿರ ಕೃಷಿಯೆಡೆಗೆ”

## ಕರ್ನಾಟಕದಲ್ಲಿ ರಾಗಿ ಮತ್ತು ಹಿಂಗಾರು ಜೋಳ ಆಧಾರಿತ ಆಹಾರ ಮತ್ತು ಕೃಷಿ ವ್ಯವಸ್ಥೆಗಳನ್ನು ಸದೃಢ ಮಾಡುವತ್ತ ಮಧ್ಯಂತರ ವರದಿ ಮತ್ತು ಬಹು–ಮುಖಿ ಶಿಫಾರಸ್ಸುಗಳು

**ಅಕ್ಟೋಬರ್, 2014**

ಕೃಷಿ ಆಯುಕ್ತರ ಕಾರ್ಯಾಲಯದ ಆವರಣ,
ಶೇಷಾದ್ರಿ ರಸ್ತೆ, ಬೆಂಗಳೂರು – 560 001
ಫೋನ್: 080-22115496, ಇ–ಮೇಲ್: agripricecommission@gmail.com

# ಕರ್ನಾಟಕ ಕೃಷಿ ಬೆಲೆ ಆಯೋಗ

| | | |
|---|---|---|
| 1. | **ಡಾ: ಟಿ.ಎನ್. ಪ್ರಕಾಶ್ ಕಮ್ಮರಡಿ** | *ಅಧ್ಯಕ್ಷರು* |
| 2. | **ಶ್ರೀ. ಹನುಮನಗೌಡ ಬೆಳಗುರ್ಕಿ,** *ರೈತರ ಪ್ರತಿನಿಧಿ* | *ಸದಸ್ಯರು* |
| 3. | **ಶ್ರೀ ನರಸಿಂಹಪ್ಪ,** *ರೈತರ ಪ್ರತಿನಿಧಿ* | *ಸದಸ್ಯರು* |
| 4. | **ಶ್ರೀ ಭರತ್ ಲಾಲ್ ಮೀನಾ,** *ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,* ಕೃಷಿ ಇಲಾಖೆ | *ಸದಸ್ಯರು* |
| 5. | **ಶ್ರೀ ಮಹೇಂದ್ರ ಜೈನ್,** *ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,* ಸಹಕಾರ ಇಲಾಖೆ | *ಸದಸ್ಯರು* |
| 6. | **ಶ್ರೀ. ಸುಬೋಧ್ ಯಾದವ್**, *ಆಯುಕ್ತರು*, ಕೃಷಿ ಇಲಾಖೆ | *ಸದಸ್ಯ ಕಾರ್ಯದರ್ಶಿಗಳು* |
| 7. | **ಶ್ರೀ. ಹರ್ಷಗುಪ್ತ,** *ಆಯುಕ್ತರು*, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ | *ವಿಶೇಷ ಆಹ್ವಾನಿತರು* |
| 8. | **ಡಾ: ಮುದ್ದು ಮೋಹನ್**, *ನಿರ್ದೇಶಕರು*, ಕೃಷಿ ಮಾರುಕಟ್ಟೆ ಇಲಾಖೆ | *ವಿಶೇಷ ಆಹ್ವಾನಿತರು* |
| 9. | **ಶ್ರೀ. ಎಸ್. ಪಿ. ಷಡಕ್ಷರ ಸ್ವಾಮಿ,** *ತೋಟಗಾರಿಕೆ ನಿರ್ದೇಶಕರು* | *ವಿಶೇಷ ಆಹ್ವಾನಿತರು* |
| 10. | **ಡಾ. ಬಿ.ಕೆ. ಧರ್ಮರಾಜನ್,** *ಕೃಷಿ ನಿರ್ದೇಶಕರು*, ಕೃಷಿ ಇಲಾಖೆ | *ವಿಶೇಷ ಆಹ್ವಾನಿತರು* |
| 11. | **ಡಾ. ಕೆ.ವಿ. ಮಹಬಲಗಿರಿಭಟ್,** *ಮುಖ್ಯ ಪ್ರಧಾನ ವ್ಯವಸ್ಥಾಪಕರು,* ರಾಜ್ಯ ಕೃಷಿ ಮಾರಾಟ ಮಂಡಳಿ | *ವಿಶೇಷ ಆಹ್ವಾನಿತರು* |
| 12. | **ಡಾ. ಶ್ರೀಧರ ಅಡಿಗ,** *ಸಹಾಯಕ ಕೃಷಿ ನಿರ್ದೇಶಕರು* | *ತಾಂತ್ರಿಕ ಅಧಿಕಾರಿಗಳು* |

**ತಾಂತ್ರಿಕ ಸಲಹೆ:**

1. **ಡಾ. ಎಂ.ವಿ. ಚೆನ್ನ ಬೈರೇಗೌಡ:** *ಯೋಜನಾ ಸಂಯೋಜಕರು,* ಅಖಿಲಭಾರತ ತೃಣಧಾನ್ಯ ಸಂಶೋಧನಾ ಸಂಯೋಜನೆ, ಐ.ಸಿ.ಎ.ಆರ್, ಬೆಂಗಳೂರು
2. **ಡಾ. ಎಂ.ಜಿ. ಚಂದ್ರಕಾಂತ್:** *ಪ್ರಾಧ್ಯಾಪಕರು ಮತ್ತು ವಿ.ವಿ. ಮುಖ್ಯಸ್ಥರು,* ಕೃಷಿ ಅರ್ಥಶಾಸ್ತ್ರ ವಿಭಾಗ, ಕೃ.ವಿ.ವಿ., ಬೆಂಗಳೂರು
3. **ಡಾ: ಹೆಚ್. ಸುಬ್ಬಯ್ಯ:** *ಅಪರ ಕೃಷಿ ನಿರ್ದೇಶಕರು,* ಬೆಳೆ ಅಭಿವೃದ್ಧಿ ಮತ್ತು ಯೋಜನೆ, ಕೃಷಿ ಇಲಾಖೆ, ಬೆಂಗಳೂರು
4. **ಡಾ: ಐ. ಶಂಕರೇಗೌಡ:** *ಸಹ ಸಂಶೋಧನಾ ನಿರ್ದೇಶಕರು,* ಕೃ.ವಿ.ವಿ., ರಾಯಚೂರು
5. **ಡಾ. ಎಸ್. ಎಂ. ಮುಂದಿನ ಮನಿ:** *ಪ್ರಾಧ್ಯಾಪಕರು, ಕೃಷಿ ಅರ್ಥಶಾಸ್ತ್ರ ವಿಭಾಗ,* ಕೃ.ವಿ.ವಿ., ಧಾರವಾಡ
6. **ಶ್ರೀಮತಿ ಎನ್. ಅಂಬಿಕಾ:** *ಜಂಟಿ ಕೃಷಿ ನಿರ್ದೇಶಕರು,* ಬೆಂಗಳೂರು ಗ್ರಾಮಾಂತರ
7. **ಶ್ರೀ. ಶಿವಕುಮಾರ್:** *ಜಂಟಿ ಕೃಷಿ ನಿರ್ದೇಶಕರು, (ಪ್ರಭಾರ)* ಮೈಸೂರು
8. **ಡಾ. ಶಬನಾ ಎಂ. ಶೇಖ್:** *ಜಂಟಿ ಕೃಷಿ ನಿರ್ದೇಶಕರು, (ಪ್ರಭಾರ)* ಧಾರವಾಡ
9. **ಶ್ರೀ. ಟಿ.ಎಸ್. ರುದ್ರೇಶಪ್ಪ:** *ಜಂಟಿ ಕೃಷಿ ನಿರ್ದೇಶಕರು, (ಪ್ರಭಾರ)* ರಾಯಚೂರು

**ಸಹಾಯಕ ಸಿಬ್ಬಂದಿ:**

ಶ್ರೀ. ಅರುಣ್, *ಪ್ರದಸ,* ಶ್ರೀ. ಬಿ.ಸಿ. ಪ್ರಸಾದ್ *ಬೆ.ಗಾ.,* ಶ್ರೀಮತಿ. ವಿ. ಭಾಗ್ಯಲಕ್ಷ್ಮಿ, *ವಿಶೇಷ ಕರ್ತವ್ಯಾಧಿಕಾರಿ,* ಶ್ರೀ. ಕೃಷ್ಣಮೂರ್ತಿ, *ವಾಹನ ಚಾಲಕ,* ಶ್ರೀ. ಅರಬ್ ಜಾನ್, *ಡಿ. ಗ್ರೂಪ್ ನೌಕರ,* ಶ್ರೀ ಸಿದ್ದರಾಮಗೌಡ, *ಡಿ. ಗ್ರೂಪ್ ನೌಕರ*

# ಪರಿವಿಡಿ


| *ಕ್ರ.ಸಂ.* | *ಶೀರ್ಷಿಕೆಗಳು* | *ಪು. ಸಂ.* |
|---|---|---|
| | ಕೃತಜ್ಞತೆ | 3 |
| | ಕಾರ್ಯರೂಪಿ ಸಾರಾಂಶ | 4 |
| I. | ಪ್ರಸ್ತಾವನೆ | 7 |
| II. | ಕೃಷಿ ಬೆಲೆ ಆಯೋಗದ ಮದ್ಯಪ್ರವೇಶ | 8 |
| III | ಪೂರಕ ಮಾಹಿತಿಗಳು | 9 |
| IV | ಇಳುವರಿ ಮತ್ತು ವೆಚ್ಚ | 13 |
| V | ಬೆಲೆ ಮತ್ತು ಲಾಭದಾಯಕತೆ | 16 |
| | ಪಟ್ಟಿ – I | 18 |
| VI | **ಬಹು ಸ್ವರೂಪಿ ಶಿಫಾರಸ್ಸುಗಳು** | 19 |
| | ***A. ಉತ್ಪಾದನೆ ಅಧಿಕಗೊಳಿಸುವುದು*** | 20 |
| | ***B. ಬೆಲೆಯೇತರ (Non-Price) ಪ್ರೋತ್ಸಾಹಗಳು*** | 23 |
| | ***C. ಸ್ಥಳೀಯವಾಗಿ ಖರೀದಿ, ಶೇಖರಣೆ ಮತ್ತು ಶೀಘ್ರ ಪಾವತಿ*** | 24 |
| | ***D. ಪೂರಕ ಕ್ರಮಗಳು*** | 26 |
| | ***E. ಈ ಸಾಲಿನ ಆಧ್ಯತೆ*** | 29 |
| VII | ಅನುಬಂಧ 1 ರಿಂದ 11 | |
| VIII | ಪತ್ರಿಕಾ ವರದಿಗಳು: | |

## ಕೃತಜ್ಞತೆ

ರಾಜ್ಯ ಸರ್ಕಾರದ ಅತ್ಯಂತ ಮಹತ್ವಾಕಾಂಕ್ಷೆಯ **'ಅನ್ನಭಾಗ್ಯ'** ಯೋಜನೆಯಡಿ ಎರಡು **'ಸಿರಿಧಾನ್ಯ'**ಗಳಾದ ರಾಗಿ ಮತ್ತು ಬಿಳಿ ಜೋಳಗಳನ್ನು ತಂದಿರುವುದು ಒಂದು ಚಾರಿತ್ರಿಕ ಕ್ರಮವಾಗಿದೆ. ಆಹಾರ ಭದ್ರತೆಗೆ ರುಚಿ, ಪೌಷ್ಠಿಕದಾಯಕತೆ, ಸಾಂಸ್ಕೃತಿಕ ಮೆರಗನ್ನು ನೀಡಿದ ಈ ಯೋಜನೆ ಬಡವರು, ರೈತಾಪಿ ವರ್ಗ, ತಳ ಮಟ್ಟದ ಸಂಘಸಂಸ್ಥೆಗಳ ಹಲವು ದಿನಗಳ ಬೇಡಿಕೆಯಾಗಿತ್ತು. ಈ ಯೋಜನೆಗೆ ಅಪಾರ ಪ್ರಮಾಣದ ಆಹಾರ ಧಾನ್ಯಗಳ ಅಗತ್ಯವಿದ್ದು ಈ ಮೂಲಕ ಇವುಗಳ ಉತ್ಪಾದನೆಯನ್ನೂ ಕೂಡ ಅಧಿಕಮಾಡಬಹುದಾಗಿದೆ. ರಾಜ್ಯದ ಕೃಷಿ ಅಭಿವೃದ್ಧಿಗೆ ಸುಸ್ಥಿರ ಆಯಾಮ ನೀಡುವ ಸಾಧ್ಯತೆಯಿರುವುದರಿಂದ **'ಕರ್ನಾಟಕ ಕೃಷಿ ಬೆಲೆ ಆಯೋಗ'** ಈ ನಿಟ್ಟಿನಲ್ಲಿ ಅಗತ್ಯ ಬೆಂಬಲ ಬೆಲೆ, ಬೆಲೆಯೇತರ ಪ್ರೋತ್ಸಾಹ ಕ್ರಮಗಳ ಜೊತೆಗೆ ಯೋಗ್ಯ ಖರೀದಿ ವ್ಯವಸ್ಥೆಯನ್ನೂ ರೂಪಿಸಿ ಸರ್ಕಾರಕ್ಕೆ ಸೂಚಿಸುವ ಸಲುವಾಗಿ ಈ **ಮಧ್ಯಂತರ ವರದಿ**ಯ ರಚನೆಯನ್ನು ಕೈಗೆತ್ತಿಕೊಂಡಿರುತ್ತದೆ.

ಈ ನಿಟ್ಟಿನಲ್ಲಿ ಸಂಪೂರ್ಣ ಸಹಕಾರ, ಅಗತ್ಯ ಸಲಹೆ ಸೂಚನೆಗಳನ್ನು ನೀಡಿದ ಆಯೋಗದ ಸದಸ್ಯರಿಗೆ, ಅದರಲ್ಲೂ ಮುಖ್ಯವಾಗಿ **ಶ್ರೀ ಹನುಮನ ಗೌಡ ಬೆಳಗುರ್ಕಿ**ಯವರಿಗೆ, ಎಲ್ಲಾ ಆಹ್ವಾನಿತ ಸದಸ್ಯರಿಗೂ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರೈತರೊಡನೆ ಚರ್ಚೆಗೆ ಕಾರ್ಯಾಗಾರಗಳನ್ನು ನಡೆಸಲು ಅನುವು ಮಾಡಿಕೊಟ್ಟ ಕೃಷಿ ಇಲಾಖೆಯ ಆಯುಕ್ತರು, ನಿರ್ದೇಶಕರು ಮತ್ತಿತರ ಇಲಾಖಾ ಅಧಿಕಾರಿಗಳಿಗೂ, ಆಯಾ ಜಿಲ್ಲೆಗಳಲ್ಲಿ ವಸತಿ ಮತ್ತು ವಾಹನ ಸೌಲಭ್ಯ ಒದಗಿಸಿಕೊಟ್ಟ ಜಿಲ್ಲಾಧಿಕಾರಿಗಳಿಗೆ, ಸಕ್ರಿಯವಾಗಿ ಭಾಗವಹಿಸಿದ ಬೆಂಗಳೂರು, ರಾಯಚೂರು ಮತ್ತು ಧಾರವಾಡ ಕೃಷಿ ವಿಶ್ವ ವಿದ್ಯಾನಿಲಯದ ವಿಜ್ಞಾನಿಗಳು, ಅರ್ಥಶಾಸ್ತ್ರಜ್ಞರಿಗೂ, ಸಭೆ, ಕಾರ್ಯಾಗಾರ ಚರ್ಚೆಗಳಲ್ಲಿ ಭಾಗವಹಿಸಿ ಅಗತ್ಯ ಸಲಹೆ ಸೂಚನೆ ನೀಡಿರುವ ಹಿರಿಯರಾದ ಡಾ. ದ್ವಾರಕೀನಾಥ್, ಡಾ. ಬಿಸಲಯ್ಯ, ಡಾ. ಸೀತಾರಾಂ, ಡಾ. ವಿ.ಎಂ. ರಾವ್, ಡಾ. ದೇಶಪಾಂಡೆಯವರಿಗೆ, ವಿವಿಧ ಸ್ವಯಂ ಸೇವಾ ಸಂಸ್ಥೆಗಳಿಗೆ, ಈ ಬಗ್ಗೆ ಸಾಕಷ್ಟು ಪ್ರಚಾರ, ಅರಿವನ್ನು ಮೂಡಿಸಿರುವ ಮಾಧ್ಯಮ ಮಿತ್ರರಿಗೆ, ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಕಾರ್ಯಾಗಾರ, ಚರ್ಚೆ, ಸಂವಾದಗಳಲ್ಲಿ ಭಾಗವಹಿಸಿ ಅರ್ಥಪೂರ್ಣ ಕಾಣಿಕೆ ನೀಡಿರುವ ***ರಾಜ್ಯದ ಮೂಲೆ ಮೂಲೆಯ 200 ಕ್ಕೂ ಅಧಿಕ ರಾಗಿ ಮತ್ತು ಜೋಳ ಬೆಳೆಗಾರರಿಗೆ*** ಆಯೋಗದ ಪರವಾಗಿ ಅನಂತ ಕೃತಜ್ಞತೆಯನ್ನು ಅರ್ಪಿಸುತ್ತಿರುವೆನು.

ಎಲ್ಲಕ್ಕಿಂತ ಮುಖ್ಯವಾಗಿ ಈ ವರದಿ ರೂಪಗೊಳ್ಳುವಲ್ಲಿ **ಶ್ರೀ ಹರ್ಷಗುಪ್ತ, *ಆಯುಕ್ತರು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ*** ಇವರು ವಹಿಸಿದ ಪಾತ್ರ ಅತ್ಯಂತ ಪ್ರಮುಖವಾಗಿದೆ. ಇವರ ದಿನಾಂಕ 13/05/2014ರ ***"ಆಹಾರ ಧಾನ್ಯಗಳ ಸ್ಥಳೀಯವಾಗಿ ಖರೀದಿ"*** ಬಗೆಗಿನ ಪತ್ರ (*ಅನುಬಂಧ 1*) ರಾಜ್ಯದ ಈ ಅನ್ನಭಾಗ್ಯ ಯೋಜನೆಯ ಮೇಲೆ ಅಂಕಿ ಅಂಶಗಳ ಸಮೇತ ಬೆಳಕು ಚೆಲ್ಲಿರುವುದು ಮಾತ್ರವಲ್ಲ, ಈ ವರದಿಗೆ ಒಂದು ಸ್ಪಷ್ಟ ಉದ್ದೇಶ, ಗುರಿ, ದಿಕ್ಕು ದೆಸೆಗಳನ್ನೂ ನೀಡಿರುತ್ತದೆ ಎಂದರೆ ತಪ್ಪಾಗಲಾರದು. ವಿಶೇಷ ಆಹ್ವಾನಿತರಾಗಿ ಆಯೋಗದ ಮೊದಲ ಸಭೆಗೆ ಹಾಜರಾಗಿ ಶ್ರೀ ಗುಪ್ತರವರು ಹಲವು ಪ್ರಮುಖ ವಿಚಾರಗಳನ್ನು ಪ್ರಸ್ತಾಪಿಸಿ, ಅಗತ್ಯ ಸಲಹೆಗಳನ್ನು ನೀಡಿರುತ್ತಾರೆ. ಶ್ರೀ ಹರ್ಷ ಗುಪ್ತರವರಿಗೆ ನಾನು ಆಭಾರಿಯಾಗಿರುವುದು ಮಾತ್ರವಲ್ಲ ಮುಂದೂ ಅವರ ಸಲಹೆ, ಸಹಕಾರಗಳ ನಿರೀಕ್ಷೆಯಲ್ಲಿರುವೆನು. ಹಾಗೇ ಆಯೋಗದ ತಾಂತ್ರಿಕ ಅಧಿಕಾರಿ ಡಾ. ಶ್ರೀಧರ ಅಡಿಗ, ಎಲ್ಲಾ ಸಹಾಯಕ ಸಿಬ್ಬಂದಿಗಳು, ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು.

ಕರ್ನಾಟಕದಲ್ಲಿ **ಸಾತ್ವಿಕ ಆಹಾರ** ಆ ಮೂಲಕ **ಸುಸ್ಥಿರ ಕೃಷಿ** ವ್ಯವಸ್ಥೆಗಳನ್ನು ಗಟ್ಟಿ ಮಾಡುವ ನಿಟ್ಟಿನಲ್ಲಿ, **ಈ ಮಧ್ಯಂತರ ವರದಿ** ಮತ್ತು **ಬಹು ಸ್ವರೂಪಿ ಶಿಫಾರಸ್ಸು**ಗಳನ್ನು ಮುಂದಿಡುತ್ತಾ 'ಕರ್ನಾಟಕ ಕೃಷಿ ಬೆಲೆ ಆಯೋಗ' ಇವುಗಳ ಯಶಸ್ವಿ ಅನುಷ್ಠಾನಕ್ಕಾಗಿ ಶಕ್ತಿ ಮೀರಿ ಪ್ರಯತ್ನಿಸಲಿದೆ.

ಅಕ್ಟೋಬರ್, 2014
ಬೆಂಗಳೂರು

***ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ***
***ಅಧ್ಯಕ್ಷರು***
**ಕರ್ನಾಟಕ ಕೃಷಿ ಬೆಲೆ ಆಯೋಗ**

# “ಅನ್ನ ಭಾಗ್ಯದಿಂದ ಸುಸ್ಥಿರ ಕೃಷಿಯೆಡೆಗೆ”

***ಕರ್ನಾಟಕದಲ್ಲಿ ರಾಗಿ ಮತ್ತು ಜೋಳ ಆಧಾರಿತ ಆಹಾರ ಮತ್ತು ಕೃಷಿ ವ್ಯವಸ್ಥೆಗಳನ್ನು ಗಟ್ಟಿ ಮಾಡಲು ‘ಕರ್ನಾಟಕ ಕೃಷಿ ಬೆಲೆ ಆಯೋಗದ’ ಬೆಲೆ ಮತ್ತು ಬೆಲೆಯೇತರ ಬಹು ಸ್ವರೂಪಿ ಶಿಫಾರಸ್ಸುಗಳು:***

**ಕಾರ್ಯರೂಪಿ ಸಾರಾಂಶ (Executive Summary)**

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ **‘ಅನ್ನಭಾಗ್ಯ’** ಯೋಜನೆಗೆ ಅಗತ್ಯ ಧಾನ್ಯಗಳ ಖರೀದಿಗಾಗಿ ಈ ಸಾಲಿನ (2014-15) ಮುಂಗಾರು ಋತುವಿನಲ್ಲಿ ರಾಗಿ ಮತ್ತು ಜೋಳ (ಮಾಲ್ದಂಡಿ) ಗಳಿಗಾಗಿ ಪ್ರತಿ **ಕ್ವಿಂಟಲ್‌ಗೆ ರೂ.2,000 ಬೆಂಬಲ ಬೆಲೆ** ಘೋಷಿಸಲಾಗಿದೆ.

ಇದಕ್ಕೆ ಪೂರಕವಾಗಿ ಉತ್ಪಾದಕತೆ ಹೆಚ್ಚಳ, ಉದ್ಯೋಗ ಖಾತರಿ ಯೋಜನೆಯ ಸದುಪಯೋಗ, ಸ್ಥಳೀಯವಾಗಿ ಖರೀದಿ, ಶೇಖರಣೆ, ಶೀಘ್ರ ಹಣ ಪಾವತಿಯಂತಹ **ಬೆಲೆಯೇತರ (Non Price) ಪ್ರೋತ್ಸಾಹಕ** ಕಾರ್ಯಕ್ರಮಗಳನ್ನು ‘ಕರ್ನಾಟಕ ಕೃಷಿ ಬೆಲೆ ಆಯೋಗ’ ಶಿಫಾರಸ್ಸು ಮಾಡುತ್ತಿದೆ.

ಕೊಯಿಲಿನನಂತರ ಆವಕ ಪ್ರಾರಂಭವಾಗಿ ಮಾರುಕಟ್ಟೆ ಬೆಲೆ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆಗಿಂತ ಅಧಿಕವಾಗಿದ್ದಲ್ಲಿ, ಸಾಮಾನ್ಯ ಗ್ರಾಹಕರ ಹಿತರಕ್ಷಣೆಯನ್ನೂ ಗಮನದಲ್ಲಿಟ್ಟುಕೊಂಡು ಕನಿಷ್ಠ ಮಟ್ಟದ ಖರೀದಿಗಾಗಿ ಸ್ವಲ್ಪ ಪ್ರಮಾಣದ ಹೆಚ್ಚಳದ **“ಪರಿವರ್ತನ ಶೀಲ ಬೆಂಬಲ ಬೆಲೆ”** (Flexible MSP) ಯನ್ನೂ ಶಿಫಾರಸ್ಸು ಮಾಡಲಾಗಿದೆ.

***ಕೃಷಿ ಬೆಲೆ ಆಯೋಗದ ಬಹುಸ್ವರೂಪಿ 25 ಶಿಫಾರಸ್ಸುಗಳ ಕಾರ್ಯರೂಪಿ ಸಾರಾಂಶ ಈ ಕೆಳಗೆ ಕೊಡಲಾಗಿದೆ.***

## A. ಉತ್ಪಾದನೆ ಅಧಿಕಗೊಳಿಸುವುದು:

- **ಇಳುವರಿ ಅಂತರ (Yield Gap)** ಕಡಿಮೆ ಮಾಡಿ ರಾಗಿ ಮತ್ತು ಹಿಂಗಾರು ಜೋಳಗಳ ಇಳುವರಿಯನ್ನು ಅನುಕ್ರಮವಾಗಿ ಎಕರೆವಾರು ಕನಿಷ್ಠ 10 ಕ್ವಿಂಟಲ್ ಮತ್ತು 7 ಕ್ವಿಂಟಲ್‌ಗೆ ಏರಿಸಬೇಕು.
- **ರಾಜ್ಯ ಸರ್ಕಾರ ಈಗಾಗಲೇ ಜಾರಿಗೊಳಿಸಿರುವ ಹೊಸ ಕಾರ್ಯಕ್ರಮದ ರೈತರ ಪ್ರಾತ್ಯಕ್ಷಿಕೆ ಹೊಲ**ಗಳಲ್ಲಿ ಮೇಲಿನ ಪ್ರಮಾಣದ ಇಳುವರಿಯನ್ನು ಬೆಳೆದು ತೋರಿಸಬೇಕು.
- **ಬೆಳೆ ಪ್ರದೇಶ ಅಧಿಕವಾಗಬೇಕು:** ಕನಿಷ್ಠ 10 ಲಕ್ಷ ಹೆಕ್ಟೆರ್ ಭೂಮಿಯಲ್ಲಿ ರಾಗಿ ಮತ್ತು 15 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಜೋಳ ಬೆಳೆಯುವಂತಾಗಬೇಕು. ಕನಿಷ್ಠ ಶೇ 25 ಭಾಗದ ರಾಗಿ ಮತ್ತು ಹಿಂಗಾರು ಜೋಳದ ಭೂಮಿಗೆ ನೀರಾವರಿ ದೊರಕಬೇಕು.
- **ಹೊಲಕ್ಕೊಂದು ಕೆರೆ:** ರಾಗಿ ಮತ್ತು ಜೋಳದ ರೈತರ ಹೊಲಗಳಿಗೆ **‘ಕೃಷಿ ಭಾಗ್ಯ ಯೋಜನೆಯಡಿ’**ಯಲ್ಲಿ ಕೆರೆ ನಿರ್ಮಿಸಲು ನೆರವು ನೀಡುವುದು.
- **ಕಟಾವು ಮತ್ತಿತರ ಯಂತ್ರಗಳ ಸೇವೆ:** ಖಾಸಗಿ ಸಹಭಾಗಿತ್ವದಲ್ಲಿ ರಾಗಿ ಮತ್ತು ಜೋಳ ಕೃಷಿಗೆ ಅಗತ್ಯವಾದ ಯಂತ್ರಗಳು ಅಧಿಕ ಸಂಖ್ಯೆಯಲ್ಲಿ ನಿರ್ಮಾಣವಾಗಬೇಕು.

- ❖ ಪ್ರಾತ್ಯಕ್ಷಿಕೆ ಹೊಲದ ಎಲ್ಲಾ ರಾಗಿ ಬೆಳೆಗಾರರಿಗೆ ಕಟಾವು ಯಂತ್ರದ ಸೇವೆ ಈ ಸಾಲಿನಿಂದಲೇ ಉಚಿತವಾಗಿ ಸಿಗಬೇಕು.

- ❖ ರಾಗಿ ಮತ್ತು ಜೋಳಗಳ ಇಳುವರಿ ಮತ್ತು ಉತ್ಪಾದನೆ ಹೆಚ್ಚಿಸಲು ವಿವಿಧ ಕೃಷಿ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವ **ಸಂಶೋಧನೆಗಳ ನಡುವೆ ಸಮನ್ವಯ** ಏರ್ಪಾಟಾಗಬೇಕು.

**B) ಬೆಲೆಯೇತರ (Non Price) ಪ್ರೋತ್ಸಾಹಗಳು:**

- ❖ **ಸಂಪೂರ್ಣ ರಿಯಾಯ್ತಿ**ಯಲ್ಲಿ ಬಿತ್ತನೆ ಬೀಜ ಮತ್ತು ಬೆಳೆ ವಿಮೆ ಸೌಲಭ್ಯದ ಜೊತೆಗೆ ಸಾವಯವ ಭಾಗ್ಯ, ಭೂಚೇತನ, ವಿಶೇಷ ಘಟಕ ಯೋಜನೆಗಳ ಫಲಾನುಭವ ರಾಗಿ ಮತ್ತು ಜೋಳ ಬೆಳೆಗಾರರಿಗೆ ದೊರಕಬೇಕು.

- ❖ ರಾಗಿ ಮತ್ತು ಜೋಳ ಬೆಳೆಗಳ ಕ್ಷೇತ್ರವನ್ನು ಆಕ್ರಮಿಸಿ ಪೈಪೋಟಿ ನೀಡುತ್ತಿರುವ ಮುಸುಕಿನ ಜೋಳ, ಹತ್ತಿಗಳಂತಹ ವಾಣಿಜ್ಯ ಬೆಳೆಗಳಿಗೆ **ಬೀಜ ರಿಯಾಯ್ತಿ ಸಂಪೂರ್ಣ ನಿಲ್ಲಿಸುವುದು**.

- ❖ **ಉದ್ಯೋಗ ಖಾತ್ರಿ ಯೋಜನೆ** (MGNREGA)ಯ ಮೂಲಕ ಎಕರೆ ಒಂದಕ್ಕೆ 10-15 ದಿನಗೂಲಿ ನೌಕರರು ರಾಗಿ ಮತ್ತು ಜೋಳ ಬೆಳೆಗಾರರಿಗೆ ಬರುವಂತೆ ಮಾಡಬೇಕು.

**C) ಸ್ಥಳೀಯವಾಗಿ ಖರೀದಿ ಮತ್ತು ಶೀಘ್ರ ಪಾವತಿ:**

- ❖ ರೈತರೊಡನೆ **ಖರೀದಿ ಒಪ್ಪಂದ** (Buy back) ಮಾಡಿ, ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳ ಮೂಲಕ ಸ್ಥಳೀಯವಾಗಿ ಖರೀದಿಸಿ, ಶೀಘ್ರ ಹಣ ಪಾವತಿಯಾಗಬೇಕು.

- ❖ ಗುಣ ಮಟ್ಟ ಮತ್ತು ಖರೀದಿ ವ್ಯವಸ್ಥೆ ಮೇಲೆ ತೀವ್ರ ನಿಗಾ ವಹಿಸಿ, ಗ್ರಾಮೀಣ ಮಟ್ಟದಲ್ಲಿ ಶೇಖರಣೆ ಮಾಡಬೇಕು.

- ❖ ಮಾರುಕಟ್ಟೆಯಲ್ಲಿ ಬೆಲೆ ಸ್ಥಿರೀಕರಣಕ್ಕೆ ಪೂರಕವಾದ ರೀತಿಯಲ್ಲಿ ರಾಗಿ ಮತ್ತು ಜೋಳದ ಖರೀದಿ ಸಮಯ ಮತ್ತು ಪ್ರಮಾಣ ನಿರ್ದರಿಸಬೇಕು.

**D) ಪೂರಕ ಕ್ರಮಗಳು:**

- ❖ ಉತ್ಪಾದನೆ, ಖರೀದಿ, ಶೇಖರಣೆ ಮತ್ತು ವಿತರಣೆಗಳ **ಜವಾಬ್ದಾರಿ** ವಿವಿಧ ಇಲಾಖೆಗಳ ನಡುವೆ **ಸೂಕ್ತ ರೀತಿಯಲ್ಲಿ ಹಂಚಿಕೆಯಾಗಬೇಕು**.

- ❖ **ಸಮುದಾಯ ಸಂಘಟನೆ**ಗಳು ಸಕ್ರಿಯವಾಗಿ ಭಾಗವಹಿಸುವಂತಾಗಿ, ರೈತ ಸಹಭಾಗಿತ್ವದಲ್ಲಿ ತಳಿ ಅಭಿವೃದ್ದಿಯಾಗಬೇಕು.

- ❖ ಅನ್ನಭಾಗ್ಯ ಯೋಜನೆಯ ದೀರ್ಘಾವಧಿ ಪರಿಣಾಮಗಳ **ವಸ್ತು ನಿಷ್ಠ ವಿಶ್ಲೇಷಣೆ**ಯಾಗುವ ನಿಟ್ಟಿನಲ್ಲಿ ವಿವಿದ ಸಂಶೋಧನಾ ಸಂಸ್ಥೆಗಳು ಕೈಜೋಡಿಸಬೇಕು.

- ❖ ರಾಗಿ ಮತ್ತು ಬಿಳಿ ಜೋಳಗಳು ಪೌಷ್ಟಿಕತೆ, ಪರಿಸರ, ಮೇವು ಇತ್ಯಾದಿಗಳ ಮೂಲಕ ನೀಡುವ ಸೇವೆಯ ಮೌಲ್ಯದ ಲೆಕ್ಕಾಚಾರವಾಗಿ, ಆ ಮೂಲಕ ರೈತರಿಗೆ ನೇರವಾಗಿ ಅಧಿಕ **ಆದಾಯ ವರ್ಗಾವಣೆ** (Income Transfer) ವ್ಯವಸ್ಥೆ ಏರ್ಪಾಟಾಗಬೇಕು.

- ❖ ಈ ನಿಟ್ಟಿನಲ್ಲಿ ವ್ಯಾಪಕ ಪ್ರಚಾರ ಮತ್ತು ಪ್ರಬಲ ಜನಾಭಿಪ್ರಾಯ ರೂಪುಗೊಳ್ಳಬೇಕು. ಉತ್ಪನ್ನಗಳ ಮೌಲ್ಯವರ್ಧನೆಯಾಗಿ **ರೈತರ ಗುಂಪು ಮಾರಾಟ** ಪ್ರೋತ್ಸಾಹಿಸಬೇಕು.

- ❖ **ಉನ್ನತ ಮಟ್ಟದ ಸಮಿತಿ:** ಅನ್ನಭಾಗ್ಯ ಯೋಜನೆಯ ಯಶಸ್ಸಿಗೆ ಪೂರಕವಾದ ಈ ಎಲ್ಲಾ ಶಿಫಾರಸ್ಸುಗಳ ಅನುಷ್ಠಾನಕ್ಕೆ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ನೇತೃತ್ವದಲ್ಲಿ ಒಂದು **'ಉನ್ನತ ಮಟ್ಟದ ಸಮಿತಿ'** ರಚಿಸಿ ಕಾರ್ಯ ಪ್ರವೃತ್ತರಾಗಬೇಕು.

**E. ಈ ಸಾಲಿನ ಆದ್ಯತೆ:**

- ❖ **ಪರಿವರ್ತನಾಶೀಲ ಬೆಂಬಲ ಬೆಲೆ: ಪ್ರಸ್ತುತ ಸಾಲಿನಲ್ಲಿ ಘೋಷಿಸಿರುವ ಬೆಂಬಲ ಬೆಲೆಗಿಂತ ಕೊಯಿಲಿನ ನಂತರದ ಸಮಯದಲ್ಲಿ ಮಾರುಕಟ್ಟೆ ಬೆಲೆ ಅಧಿಕವಾಗಿದ್ದಲ್ಲಿ ಸದ್ಯದ ಬೆಂಬಲ ಬೆಲೆಯನ್ನು ಪುನರ್ ಪರಿಶೀಲಿಸಿ ಹೆಚ್ಚಿಸುವುದು.**

- ❖ ಖಾಸಗಿ ವರ್ತಕರಿಗೆ **'ಪೈಪೋಟಿ ಖರೀದಿ'**ಗೂ ಅವಕಾಶವಿರುವಂತೆ, ಕನಿಷ್ಠ ಒಂದು ಲಕ್ಷ ಟನ್ ಪ್ರಮಾಣದ ರಾಗಿ ಮತ್ತು ಗೋದಿ ಖರೀದಿ ಮಾಡುವುದು.

- ❖ ರಾಜ್ಯ ಸರ್ಕಾರ ವಿವಿಧ ರಾಜಕೀಯ ಪಕ್ಷಗಳು ಮತ್ತು ಬೇರೆ ಬೇರೆ ರಾಜ್ಯ ಸರ್ಕಾರಗಳ ಸಹಮತ ಪಡೆದು ಮುಂದಾಳತ್ವ ವಹಿಸಿ ರಾಗಿ ಮತ್ತು ಜೋಳ ಬೆಳೆಗಾರರಿಗೆ ಅಧಿಕ ಪ್ರೋತ್ಸಾಹ ನೀಡುವ ವಿಚಾರವಾಗಿ **ಕೇಂದ್ರದೊಡನೆ ಸೂಕ್ತ ರೀತಿಯಲ್ಲಿ ವ್ಯವಹರಿಸುವುದು.**

- ❖ ರಾಗಿ ಮತ್ತು ಜೋಳದಂತಹ ಸಿರಿಧಾನ್ಯಗಳ ರೈತರು ನೀಡುವ **'ಬಹುವಿಧದ ಭದ್ರತೆಗೆ'** ಪ್ರತಿಫಲ ನೀಡುವ ನಿಟ್ಟಿನಲ್ಲಿ ವರದಿ, ಕಾಯಿದೆ, ನೀತಿಗಳ ನಿರ್ಮಾಣ ಮಾಡುವುದು.

**ಈ ಎಲ್ಲಾ ಶಿಫಾರಸ್ಸುಗಳ ಅನುಷ್ಠಾನಕ್ಕಾಗಿ 'ಕೃಷಿ ಬೆಲೆ ಆಯೋಗ' ಸಕ್ರಿಯವಾಗಿ ಪ್ರಯತ್ನಿಸಿ, ಈ ನಿಟ್ಟಿನಲ್ಲಿ ಎದುರಾಗುವ ಅಡ್ಡಿ, ಅಡಚಣೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದೆ ಪೂರ್ಣ ಪ್ರಮಾಣದ ವರದಿಯನ್ನು ಸಲ್ಲಿಸಲಿದೆ.**

# I. ಪ್ರಸ್ತಾವನೆ:

1. ಬಡತನ, ಹಸಿವು, ಅಪೌಷ್ಟಿಕತೆ ಅತಿಯಾಗಿರುವ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಕಡುಬಡವರಿಗೆ ಅತಿ ರಿಯಾಯ್ತಿ ದರದಲ್ಲಿ ಮಾಸಿಕ 5 ಕಿ. ಗ್ರಾಂ ಆಹಾರ (ಅಕ್ಕಿ, ಗೋಧಿ, ತೃಣ ಧಾನ್ಯ ಕ್ರಮವಾಗಿ ರೂ. 3, 2, 1 ರಂತೆ) ಒದಗಿಸುವ ನಿಟ್ಟಿನಲ್ಲಿ ಬಂದಂತಹ **"ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ, 2013"** ಅತ್ಯಂತ ಸ್ವಾಗತಾರ್ಹ ಕ್ರಮವಾಗಿದೆ. ಸ್ವಾತಂತ್ರ್ಯಾನಂತರ ಬಂದಂತಹ ಸಮಾನತೆ ಮತ್ತು **'ಒಳಗೊಳ್ಳುವ ಅಭಿವೃದ್ಧಿ'** (*Inclusive Growth*) ಎಡೆಗಿನ ಅತ್ಯಂತ ಪ್ರಮುಖ ಕಲ್ಯಾಣಕಾರ್ಯಕ್ರಮವಾದ ಇದು ದೇಶದ ಶೇ. 75 ಭಾಗ ಗ್ರಾಮೀಣ ಪ್ರದೇಶದ ಮತ್ತು ಶೇ 50 ಭಾಗ ಪಟ್ಟಣ ಪ್ರದೇಶದ ಜನರನ್ನು ತಲುಪುವ ಮಹದಾಶಯ ಹೊಂದಿರುತ್ತದೆ.

***"ಜೋಳ ಉಂಡವ ಗೂಳಿಯಂತಾದಾನು,***
***ರಾಗಿ ಉಂಡವ ನಿರೋಗಿಯಾದಾನು"***
**ಎನ್ನುವ ಗಾದೆ ಗ್ರಾಮೀಣ ಬಾಗದಲ್ಲಿ ಪ್ರಚಲಿತದಲ್ಲಿದೆ**

2. 2013 ರಲ್ಲಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಂತಹ **ಶ್ರೀ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ** ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಅಕ್ಕಿಯ ಜೊತೆಗೆ ರುಚಿ, ಪೌಷ್ಟಿಕತೆ, ಸಂಸ್ಕೃತಿ ಇತ್ಯಾದಿ ಆಯಾಮಗಳನ್ನು ಹೊಂದಿರುವ ರಾಗಿ ಮತ್ತು ಬಿಳಿ ಜೋಳವನ್ನು ಬಡವರಿಗೆ ಕುಂಟುಂಬ ಒಂದಕ್ಕೆ 30 ಕಿ.ಗ್ರಾಂಗಳನ್ನು ರೂ. ಒಂದರಂತೆ ವಿತರಿಸುವ ಮಹತ್ವಾಕಾಂಕ್ಷಿಯ **'ಅನ್ನಭಾಗ್ಯ'** ಯೋಜನೆ ಜಾರಿಗೆ ತಂದಿರುವುದು ದಿಟ್ಟ ಕ್ರಮವಾಗಿದೆ.

3. ಸುಮಾರು 98 ಲಕ್ಷ ಫಲಾನುಭವಿಗಳ ಗುರಿ ಹೊಂದಿರುವ, 2014 ಜನವರಿಯಿಂದ ಜಾರಿಗೆ ಬಂದಿರುವ ಈ ಬೃಹತ್ ಯೋಜನೆಗೆ ವಾರ್ಷಿಕ 36 ಲಕ್ಷ ಟನ್‌ಗಳಷ್ಟು ಆಹಾರ ದಾನ್ಯಗಳ ಅಗತ್ಯವಿರುತ್ತದೆ. ಇದರಲ್ಲಿ ಬಹುಪಾಲು ಹೊರ ಪಂಜಾಬ್, ಹರ್‍ಯಾಣ, ಛತ್ತೀಸ್‌ಗಡ್ ರಾಜ್ಯಗಳಿಂದ ಬರುತ್ತಿದ್ದು ರಾಜ್ಯದ ರೈತರಿಂದ ಈ ನಿಟ್ಟಿನಲ್ಲಿ ಖರೀದಿಸುವ ಪ್ರಮಾಣ ಕೇವಲ 3 ಲಕ್ಷ ಟನ್‌ಗೆ ಮೀರಿರುವುದಿಲ್ಲ. ಇದರಲ್ಲಿ ಬಹುಪಾಲು ಅಕ್ಕಿಯಾಗಿದ್ದು ಅತ್ಯಲ್ಪ ಪ್ರಮಾಣದಲ್ಲಿ ರಾಗಿ ಒಳಗೊಂಡಿರುತ್ತದೆ.

4. ರಾಜ್ಯದ ದಕ್ಷಿಣ ಭಾಗದಲ್ಲಿ **'ರಾಗಿ ಮುದ್ದೆ'**, ಉತ್ತರದಲ್ಲಿ **'ಜೋಳದ ರೊಟ್ಟಿ'** ಜನರ ಅತ್ಯಂತ ಜನಪ್ರಿಯ ಆಹಾರ. ಹಾಗಾಗಿ ಅನ್ನ ಭಾಗ್ಯ ಯೋಜನೆಗೆ ಅಗತ್ಯವಿರುವ ಒಟ್ಟು ಆಹಾರ ಧಾನ್ಯಗಳಲ್ಲಿ ಅರ್ಧದಷ್ಟು ಪ್ರಮಾಣ ರಾಗಿ, ಜೋಳ, ಸ್ಥಳೀಯ ಅಕ್ಕಿ ತಳಿಗಳು, ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಗೋದಿ, ಸಜ್ಜೆ ಧಾನ್ಯಗಳನ್ನು ಸೇರಿಸುವುದು ಸೂಕ್ತ ಎನ್ನಲಾಗಿದೆ (*ಅನುಬಂಧ 1*)

5. ಅಂದರೆ ಸರ್ಕಾರ ಮಧ್ಯಪ್ರವೇಶ ಮಾಡಿ ರಾಜ್ಯದಲ್ಲಿ 10-12 ಲಕ್ಷ ಟನ್‌ಗಳಷ್ಟು ರಾಗಿ, ಬಿಳಿ ಜೋಳ ಮತ್ತು ಸ್ಥಳೀಯ ಅಕ್ಕಿ ತಳಿಗಳನ್ನು ಅಧಿಕವಾಗಿ ಉತ್ಪಾದನೆ ಮಾಡಿ ಬೆಂಬಲ ಬೆಲೆ ನೀಡಿ ಖರೀದಿಸಿ ಬಡವರಿಗೆ ಹಂಚುವ ಅವಕಾಶ ಬಂದಿರುತ್ತದೆ.

***ಆಯಾಭಾಗದ ಆಹಾರ ಪದ್ಧತಿಗೆ ಅನುಗುಣವಾಗಿ ಸತ್ವಯುತ ಆಹಾರ ವ್ಯವಸ್ಥೆ ಆ ಮೂಲಕ ಸ್ವಾವಲಂಬಿ ಸುಸ್ಥಿರ ಕೃಷಿ ವ್ಯವಸ್ಥೆಗಳನ್ನು ಹುಟ್ಟು ಹಾಕುವ ಅಪಾರ ಅವಕಾಶವಿರುವುದರಿಂದ 'ಕರ್ನಾಟಕ ಕೃಷಿ ಬೆಲೆ ಆಯೋಗ' ಈ ವಿಚಾರವನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಂಡಿರುತ್ತದೆ.***

## II. ಕೃಷಿ ಬೆಲೆ ಆಯೋಗದ ಮದ್ಯಪ್ರವೇಶ:

6. ಕರ್ನಾಟಕ **'ಕೃಷಿ ಬೆಲೆ ಆಯೋಗ'ದ** ಮೇಲಿನ ಷರತ್ತು ಮತ್ತು ನಿಬಂಧನೆ ಸಂಖ್ಯೆ 4ರ ಪ್ರಕಾರ "*ಮಳೆ ಆಧಾರಿತ ಬೇಸಾಯ, ಪೌಷ್ಟಿಕತೆ, ಹವಾಮಾನ ಬದಲಾವಣೆ, ಸಂಪನ್ಮೂಲಗಳ ಸದ್ಬಳಕೆ, ಸಮರ್ಥನೀಯ ಬೆಲೆ ಮೂಲಕ ಸುಸ್ಥಿರ ಕೃಷಿ ಮತ್ತು ಆಹಾರ ಭದ್ರತೆಗಾಗಿ ಪರಿಣಾಮಕಾರಿಯಾದ ಕ್ರಮಗಳನ್ನು ರೂಪಿಸುವುದು*". ಎನ್ನಲಾಗಿದೆ. ಈ ನಿಟ್ಟಿನಲ್ಲಿ ದಿನಾಂಕ 14/07/2014 ರಲ್ಲಿ ಜರುಗಿದ ಆಯೋಗದ ಮೊದಲ ಸಭೆಯಲ್ಲಿ **ಶ್ರೀ ಹರ್ಷಗುಪ್ತ,** *ಆಯುಕ್ತರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ* ಇವರು ದಿನಾಂಕ 13/05/2014 ರಲ್ಲಿ "ಆಹಾರ ಧಾನ್ಯಗಳ ಸ್ಥಳೀಯ ಖರೀದಿ" ವಿಚಾರದ ಮೇಲೆ ಬರೆದಿರುವ ಪತ್ರವನ್ನು (*ಅನುಭಂಧ 1*) ಕೂಲಂಕುಷವಾಗಿ ಚರ್ಚಿಸಿ ನಡವಳಿ 4ರ ಅನ್ವಯ ***"ರಾಜ್ಯದಲ್ಲಿ ರಾಗಿ ಮತ್ತು ಜೋಳದ ಉತ್ಪಾದನೆ ಅಧಿಕಗೊಳ್ಳುವಂತೆ ಮಾಡಲು ಅಗತ್ಯವಿರುವ ಬೆಂಬಲ ಬೆಲೆ ಮತ್ತು ಬೆಲೆಯೇತರ ಕ್ರಮಗಳನ್ನು ರೂಪಿಸಿ ಸರ್ಕಾರಕ್ಕೆ ಸೂಚಿಸುವ"*** ತೀರ್ಮಾನಕ್ಕೆ ಬರಲಾಯಿತು. ವಿಶೇಷ ಆಹ್ವಾನಿತರಾಗಿ ಸಭೆಯಲ್ಲಿ ಬಾಗವಹಿಸಿದ ಶ್ರೀ ಹರ್ಷಗುಪ್ತರವರು ಹಲವು ಉಪಯುಕ್ತ ಸಲಹೆ, ಸೂಚನೆಗಳನ್ನು ನೀಡಿರುತ್ತಾರೆ.

7. ಈ ಉದ್ದೇಶದಿಂದ ಕೃಷಿ ಇಲಾಖೆಯ ಸಕ್ರಿಯ ಸಹಯೋಗದಲ್ಲಿ (*ಉಲ್ಲೇಖ: ಕ.ಕೃ.ಬೆ.ಆ/2014-15 ದಿನಾಂಕ 23/07/2014)* ರಾಯಚೂರು (*ದಿನಾಂಕ 05/08/2014*) ಬೆಂಗಳೂರು (ದಿನಾಂಕ *08/08/2014*), ಧಾರವಾಡ (ದಿನಾಂಕ *11/08/2014*) ಮತ್ತು ಮೈಸೂರು (*ದಿನಾಂಕ 19/08/2014*) ರಂದು ಇಲಾಖಾ ಅಧಿಕಾರಿಗಳನ್ನೂ ಒಳಗೊಂಡಂತೆ ರೈತರು, ವಿಜ್ಞಾನಿಗಳು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳ ನಾಲ್ಕು ಕಾರ್ಯಾಗಾರಗಳನ್ನು ನಡೆಸಲಾಯಿತು. ಈ ಕಾರ್ಯಗಾರದಲ್ಲಿ ರಾಜ್ಯದಾದ್ಯಂತ 12 ಜಿಲ್ಲೆಗಳ ಸುಮಾರು 100 ರಾಗಿ ಬೆಳೆಯುವ ರೈತರು ಮತ್ತು 12 ಜಿಲ್ಲೆಗಳ 100 ಜೋಳ ಬೆಳೆಯುವ ರೈತರು ಸಕ್ರಿಯವಾಗಿ ಪಾಲ್ಗೊಂಡು ಈ ಎರಡು ಬೆಳೆಗಳ ಉತ್ಪಾದನೆಯನ್ನು ಅಧಿಕಗೊಳಿಸಲು ಇರುವ ಅಡ್ಡಿ ಆತಂಕಗಳು ಹಾಗೂ ಈ ನಿಟ್ಟಿನಲ್ಲಿ ಅವರ ಅಭಿಪ್ರಾಯವನ್ನು ನೀಡಿರುತ್ತಾರೆ.

8. ರಾಗಿ ಮತ್ತು ಜೋಳಗಳನ್ನು ಅಧಿಕ ಉತ್ಪಾದನೆ ಮಾಡುವ ಉದ್ದೇಶ ಯಶಸ್ಸಾಗಲು ಸಂಬಂಧಿಸಿದ ವಿವಿಧ ಇಲಾಖೆಗಳ ಮತ್ತು ವಿವಿಧ ಕಾರ್ಯ ಯೋಜನೆಗಳ ಸಮನ್ವಯ ಅಗತ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಿರ್ದೇಶಕರು ಕೃಷಿ ಇಲಾಖೆ, ಮಾರಾಟ ಇಲಾಖೆ, ಆಯುಕ್ತರು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ಇಲಾಖೆ ಮತ್ತು ವಿಶೇಷ ಆಯುಕ್ತರು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯ್ತಿರಾಜ್ ಇಲಾಖೆ ಇವರೊಡನೆ ಚರ್ಚಿಸಿ ಅಗತ್ಯ ಮಾಹಿತಿ ಮತ್ತು ಅಭಿಪ್ರಾಯಗಳನ್ನು ಪಡೆಯಲಾಯಿತು. ಹಾಗೂ ದಿನಾಂಕ 02.09.2014 ರಂದು ಬೆಂಗಳೂರಿನಲ್ಲಿ ಈ ಹಿಂದಿನ ಕಾರ್ಯಾಗಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ ಕೃಷಿ ಇಲಾಖಾಧಿಕಾರಿಗಳು, ವಿಜ್ಞಾನಿಗಳು, ಕೃಷಿ ಅರ್ಥಶಾಸ್ತ್ರಜ್ಞರ ಸಭೆಯೊಂದನ್ನು ನಡೆಸಿ, ವರದಿಯ ರೂಪರೇಷೆ, ಅಂತಿಮ ಸ್ವರೂಪಗಳ ಬಗ್ಗೆ ತೀರ್ಮಾನಿಸಲಾಯಿತು.

9. ಅಂತಿಮವಾಗಿ ದಿನಾಂಖ 29.09.2014ರಂದು ಜರುಗಿದ ಆಯೋಗದ ದ್ವಿತೀಯ ಸಭೆಯಲ್ಲಿ ವರದಿಯ ಬಗ್ಗೆ ಅಮೂಲಾಗ್ರವಾಗಿ ಚರ್ಚಿಸಿ, ವಿಶೇಷ ಆಹ್ವಾನಿತರಾದ ಡಾ. ಎಸ್. ಬಿಸಾಲಯ್ಯ, ನಿವೃತ್ತ ಕುಲಪತಿಗಳು, ಕೃ.ವಿ.ವಿ., ಬೆಂಗಳೂರು, ಡಾ. ಆರ್. ಎಸ್. ದೇಶಪಾಂಡೆ, ನಿವೃತ್ತ ನಿರ್ದೇಶಕರು, ISEC, ಡಾ. ಸೀತಾರಾಮ್, ನಿವೃತ್ತ ಯೋಜನಾ ಸಂಯೋಜಕರು, ಅಖಿಲ ಭಾರತ ತೃಣಧಾನ್ಯ ಸಂಶೋಧನಾ ಯೋಜನೆ, ಕೃ.ವಿ.ವಿ., ಬೆಂಗಳೂರು, ಡಾ. ವಿ.ಎಮ್. ರಾವ್, ನಿವೃತ್ತ ಪ್ರಾಧ್ಯಾಪಕರು, ಇನ್ಸ್ಟಿಟ್ಯೂಟ್ ಆಫ್ ಸೋಷಿಯೋ ಎಕಾನಾಮಿಕ್ ಚೇಂಜ್, ಬೆಂಗಳೂರು, ಡಾ. ಎಂ.ವಿ. ಚೆನ್ನ ಬೈರೇಗೌಡ, ಯೋಜನಾ ಸಂಯೋಜಕರು, ಅಖಿಲ ಭಾರತ ತೃಣಧಾನ್ಯ ಸಂಶೋಧನಾ ಯೋಜನೆ, ಕೃ.ವಿ.ವಿ., ಬೆಂಗಳೂರು, ಇವರುಗಳ ಪ್ರತಿಕ್ರಿಯೆ, ಸಲಹೆ, ಸೂಚನೆಗಳನ್ನು ಪರಿಶೀಲಿಸಿ, ವರದಿಗೆ ಅಂತಿಮ ರೂಪ ನೀಡಲಾಯಿತು. *(ಅನುಬಂಧ – 2)*

## III. ಪೂರಕ ಮಾಹಿತಿಗಳು:

10. ಭತ್ತ ಅಥವಾ ಗೋದಿಗೆ ಹೋಲಿಸಿದಲ್ಲಿ ರಾಗಿ ಮತ್ತು ಜೋಳಗಳು ಅತಿ ಕಡಿಮೆ ನೀರು ಬೇಡುವ ಬೆಳೆಗಳು. ಹಾಗೂ ಫಲವತ್ತತೆ ಕಡಿಮೆ ಇರುವ ಮಣ್ಣಿನಲ್ಲಿ ಬರ ಪರಿಸ್ಥಿತಿಯನ್ನು ಎದುರಿಸಿ ಬೆಳೆಯಬಹುದಾದ ಒಣ ಭೂಮಿ ಬೆಳೆಗಳು. ರಾಸಾಯನಿಕ ಗೊಬ್ಬರವನ್ನು ಬಯಸದೆ, ರೋಗ ರುಜಿನಗಳಿಗೆ ಬೇಗ ತುತ್ತಾಗದೆ ಗಟ್ಟಿ ಮುಟ್ಟಾದ ಬೆಳೆಗಳು.

***ಈ ಗುಣಗಳಿಂದಾಗಿ ತೃಣ ಧಾನ್ಯಗಳು ಇಂದು ಜಾಗತಿಕ ಮಟ್ಟದ ಗಂಭೀರ ಸಮಸ್ಯೆಯಾಗಿರುವ ಹವಾಮಾನ ವೈಪರೀತ್ಯ (Climate Change) ಪರಿಸ್ಥಿತಿಗೆ ಹೊಂದಿಕೊಳ್ಳುವ ಅಪಾರ ಸಾಮರ್ಥ್ಯ ಪಡೆದಿದ್ದು ಸುಸ್ಥಿರ ಕೃಷಿಯ (Sustainable Agriculture) ಎಲ್ಲಾ ಗುಣಲಕ್ಷಣಗಳನ್ನು ಹೊಂದಿರುತ್ತವೆ.***

11. **ಬಹು ವಿಧದ ಭದ್ರತೆ:–** ರಾಗಿ ಮತ್ತು ಜೋಳಗಳು ರುಚಿ ಮತ್ತು ಪೌಷ್ಠಿಕತೆ ದೃಷ್ಟಿಯಿಂದ ಉತ್ಕೃಷ್ಟ ಆಹಾರವಾಗಿವೆ. ಅಕ್ಕಿಗೆ ಹೋಲಿಸಿದಲ್ಲಿ ಇವುಗಳಲ್ಲಿ ಪೌಷ್ಟಿಕಾಂಶಗಳು ಅತ್ಯಧಿಕವಾಗಿರುತ್ತದೆ. ಹಾಗೂ ಆರೋಗ್ಯ ವೃದ್ಧಿಗೊಳಿಸುವ ಹಲವು ಉಪಯುಕ್ತ ಅಂಶಗಳೂ ಇರುತ್ತವೆ. ಇವುಗಳ ಹುಲ್ಲು ಜಾನುವಾರುಗಳಿಗೆ ಅಷ್ಟೇ ಉತ್ತಮ ಮೇವಾಗಿರುತ್ತದೆ.

***ಹಾಗಾಗಿ ರಾಗಿ ಮತ್ತು ಜೋಳಗಳು ಆಹಾರ, ಪೌಷ್ಟಿಕತೆ, ಆರೋಗ್ಯ, ಮೇವು ಮತ್ತು ಪರಿಸರ ದೃಷ್ಟಿಗಳಿಂದ "ಬಹು ವಿಧದ ಭದ್ರತೆ" (Multiple Securities) ಸೇವೆಗಳನ್ನು ಒದಗಿಸುತ್ತವೆ ಎನ್ನಲಾಗಿದೆ. (ಅನುಬಂಧ 3).***

12. ಇಷ್ಟೆಲ್ಲಾ ಉತ್ತಮ ಗುಣ ಲಕ್ಷಣಗಳಿದ್ದರೂ ರಾಗಿ, ಜೋಳದಂತಹ ತೃಣಧಾನ್ಯಗಳ ಕೃಷಿ ಕಡೆಗಣಿಸಲ್ಪಟ್ಟಿದೆ. ರಾಷ್ಟ್ರಮಟ್ಟದಲ್ಲಿ 1960 ರಿಂದೀಚೆಗೆ ಇವುಗಳ ಬೇಸಾಯದ ಭೂಮಿ ಅರ್ಧದಷ್ಟು ಕಡಿಮೆಯಾಗಿದೆ. ಕಳೆದ 25 ವರ್ಷಗಳಲ್ಲಿ ರಾಗಿ ಬೆಳೆಯುವ ಪ್ರದೇಶ ರಾಜ್ಯದಲ್ಲಿ ಶೇ 1.4 ರಷ್ಟು ವಾರ್ಷಿಕವಾಗಿ ಕಡಿಮೆಯಾಗುತ್ತಿದ್ದರೆ, ಜೋಳದ ವಿಸ್ತೀರ್ಣ ಶೇ 3 ರಷ್ಟು ಇಳಿಕೆಯಾಗುತ್ತಾ ಬಂದಿದೆ.

***ಕಡಿಮೆ ಇಳುವರಿ, ಬೇಸಾಯಕ್ಕೆ ಅಧಿಕ ಶ್ರಮದ ಅಗತ್ಯತೆ, ಹತ್ತಿ, ಮುಸುಕಿನ ಜೋಳ, ಕಡಲೆಯಂತಹ ಲಾಭದಾಯಕ ಬೆಳೆಗಳ ಬಗ್ಗೆ ರೈತರ ಒಲವು ಈ ಎಲ್ಲಾ ಕಾರಣಗಳಿಂದಾಗಿ ರಾಗಿ ಮತ್ತು ಜೋಳದ ಕೃಷಿ ಹಿಂದೆ ಬೀಳುವಂತಾಗಿರುತ್ತದೆ.***

13. ಇವೆಲ್ಲಕಿಂತ ಮುಖ್ಯವಾಗಿ ಸರ್ಕಾರದ ಬೆಂಬಲ ಬೆಲೆ, ಖರೀದಿ, ವಿತರಣೆ ನೀತಿ, ನಿಲುವು, ಕಾರ್ಯಕ್ರಮಗಳು ರಾಗಿ ಮತ್ತು ಬಿಳಿ ಜೋಳಗಳಂತಹ ತೃಣಧಾನ್ಯ ಕೃಷಿಗೆ ಪೂರಕವಾಗಿರುವುದಿಲ್ಲ. ಇತ್ತೀಚಿಗಿನ ವರ್ಷಗಳಲ್ಲಿ ಘೋಷಿಸಿರುವ ರಾಗಿ ಮತ್ತು ಜೋಳಗಳ ಬೆಂಬಲ ಬೆಲೆ ಕರ್ನಾಟಕದ ರೈತರು ಭರಿಸಿರುವ ಉತ್ಪಾದನಾ ವೆಚ್ಚಕ್ಕಿಂತ ಬಹಳ ಕಡಿಮೆಯಿರುವುದು ವರದಿಯಾಗಿದೆ! ನಮ್ಮ ಖರೀದಿ ಮತ್ತು ವಿತರಣೆ ಕಾರ್ಯಕ್ರಮಗಳು ಬಹುತೇಕ ಎರಡು ಪ್ರಮುಖ ನೀರಾವರಿ ಆಹಾರ ಬೆಳೆಗಳಾದ ಭತ್ತ ಮತ್ತು ಗೋದಿಗೆ ಸೀಮಿತವಾಗಿವೆ.

ಹಣದುಬ್ಬರದ ನಿಯಂತ್ರಣದ ಹಿನ್ನೆಲೆಯಲ್ಲಿ ಕೇಂದ್ರಸರ್ಕಾರ ತಾನು ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆ (MSP) ಗಿಂತ ಅಧಿಕ ಬೆಲೆಯನ್ನು ರೈತರಿಗೆ ನೀಡದಂತೆ ಆಗಾಗ್ಗೆ ಸೂಚನೆ, ಎಚ್ಚರಿಕೆಗಳನ್ನು

ನೀಡುತ್ತಿರುವುದು ರಾಜ್ಯ ಸರ್ಕಾರಗಳಿಗೆ ರಾಗಿ ಮತ್ತು ಜೋಳದಂತಹ ಬೆಳೆಗಳಿಗೆ ಅಧಿಕ ಪ್ರೋತ್ಸಾಹ ನೀಡಲು ತೀವ್ರ ಹಿನ್ನಡೆಯಾಗುತ್ತಿದೆ. (*ಅನುಬಂಧ 4*)

14. ಹಾಗೆ, ನಮ್ಮ ತಂತ್ರಜ್ಞಾನ ಅಭಿವೃದ್ಧಿ ಮತ್ತು ವಿಸ್ತರಣೆ ಕಾರ್ಯಕ್ರಮಗಳಲ್ಲೂ ಈ ತೃಣಧಾನ್ಯಗಳು ಕಡೆಗಣಿಸಲ್ಪಟ್ಟಿವೆ. ಇವುಗಳ ರುಚಿ, ಪೌಷ್ಠಿಕತೆ ಇತರ ಗುಣಗಳನ್ನು ಒಳಗೊಂಡಿರುವ ತಳಿಗಳ ಅಭಿವೃದ್ಧಿ ಆಗಿರುವುದಿಲ್ಲ. ಕೊಯ್ಲಿನ ನಂತರದ ಶ್ರಮವನ್ನು ಅತಿ ಬೇಡುವ ಕಾರ್ಯಗಳಿಗೆ ಪರಿಹಾರವಾಗಿ ಸೂಕ್ತ ಯಂತ್ರ, ತಂತ್ರಗಳು ಆವಿಷ್ಕಾರವಾಗಿಲ್ಲ. ವಿಧ ವಿಧ ಗಾತ್ರದ ತೃಣಧಾನ್ಯಗಳನ್ನು ಹಿಟ್ಟಾಗಿ ಅರೆಯುವ ಯಂತ್ರಗಳ ಬಗ್ಗೆಯೂ ಅಷ್ಟೇನೂ ಗಮನ ಹರಿದಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಅಲ್ಪಸ್ವಲ್ಪ ಬೇಡಿಕೆ ಇದ್ದರೂ ಅದನ್ನು ಸರಿದೂಗಿಸುವ ಉತ್ಪಾದನೆ, ಪೂರೈಕೆ ಕೊರತೆ ರಾಗಿ ಮತ್ತು ಬಿಳಿ ಜೋಳಗಳಲ್ಲಿ ಎದ್ದು ಕಾಣುತ್ತಿದೆ.

15. **ಮಹಾತ್ಮಾಗಾಂಧಿ ಉದ್ಯೋಗ ಖಾತರಿ ಕಾಯ್ದೆ** (MGNREGA) 2005, ರ ಉಪಯೋಗ ರಾಗಿ ಮತ್ತು ಜೋಳದ ಕೃಷಿಗೆ ಸಿಗುವಂತಾದಲ್ಲಿ ಅದರ ಪರಿಣಾಮ ಅಪಾರವಾಗಿರುತ್ತದೆ. ಈ ಹಿಂದೆ ತಿಳಿಸಿದಂತೆ ಈ ಎರಡು ಮಳೆ ಆಶ್ರಯದ ಬೆಳೆಗಳ ಕೃಷಿಯಲ್ಲಿ ಅದರಲ್ಲೂ ಮುಖ್ಯವಾಗಿ ಭೂಮಿ ತಯಾರಿ, ಕಳೆ ಕೀಳುವುದು, ಕಟಾವು ಮತ್ತು ನಂತರದ ಚಟುವಟಿಕೆಗಳಿಗೆ ಅಧಿಕ ಕೂಲಿ, ಶ್ರಮದ ಅಗತ್ಯವಿರುತ್ತದೆ. ಈ ನಿಟ್ಟಿನಲ್ಲಿ ಉದ್ಯೋಗ ಖಾತರಿ ಕಾಯಿದೆಯ ಉಪಯೋಗ ಪಡೆಯುವ ಎಲ್ಲಾ ಸಾಧ್ಯತೆಯಿದ್ದು, ಇದಕ್ಕಾಗಿ ಈಗಿನ ಕಾರ್ಯಾಚರಣೆ ಮಾರ್ಗಸೂಚಿಗೆ ಅಲ್ಪ ಮಾರ್ಪಾಡು ಮತ್ತು ಪುನರ್ ವ್ಯಾಖ್ಯಾನ ಅಗತ್ಯವಿರುತ್ತದೆ.

ಇದಕ್ಕೆ ಪೂರಕವಾಗಿ (a) MGNREGAದ ಅಡಿಯಲ್ಲಿ ***"ಶೇ 60%ರಷ್ಟು ಕಾರ್ಯಗಳು ಕೃಷಿಗೆ ಸಂಬಂಧಿಸಿರಬೇಕು"*** ಎಂದು ಕೇಂದ್ರದ ಗ್ರಾಮೀಣ ಅಭಿವೃದ್ಧಿ ಕಾರ್ಯದರ್ಶಿಯವರು ಇತ್ತೀಚೆಗೆ ಎತ್ತಿರುವ ಪ್ರಸ್ತಾಪ ಮತ್ತು (b) ಈ ಯೋಜನೆಯಡಿ ***"ಶೇ 50ರಷ್ಟು ಕಾರ್ಯ ನೀರು ಸಂರಕ್ಷಣೆಗೆ ಹೋಗಿ ಆ ಮೂಲಕ ಬರ ಎದುರಿಸಲು "ಉತ್ಪಾದಕ ಆಸ್ತಿ" (Productive Asset) ರೈತರ ಹೊಲದಲ್ಲಿ ನಿರ್ಮಾಣವಾಗಬೇಕು,*** ಎಂಬುದಾಗಿ ಕೇಂದ್ರ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳ ಇತ್ತೀಚಿನ ಹೇಳಿಕೆ (*ಅನುಬಂಧ 5*)ಗಳನ್ನು ಸಮರ್ಪಕವಾಗಿ ಬಳಸ ಬೇಕಾಗಿದೆ.

16. **ಭೂ ಅಭಿವೃದ್ಧಿ ಮೂಲಕ ಉತ್ಪಾದಕ ಆಸ್ತಿ ನಿರ್ಮಾಣ:** ಮಳೆ ಆಶ್ರಯದ ಒಣ ಭೂಮಿಯಲ್ಲಿ ಎಲ್ಲಾ ತೃಣ ಧಾನ್ಯಗಳ ಕೃಷಿ ಮಾಡುತ್ತಿದ್ದು ಇದರಲ್ಲಿ ಫಲವತ್ತತೆ, ನೀರು ಹಿಡಿದಿಡುವ ಸಾಮರ್ಥ್ಯ, ಸಾವಯವ ಇಂಗಾಲ (Organic Carbon) ಇವೆಲ್ಲವುಗಳ ತೀವ್ರ ಕೊರತೆ ಇರುವುದು ತಿಳಿದು ಬಂದಿದೆ. ಮುಂಗಾರಿಗಿಂತ ಮೊದಲು ಮಾಗಿ ಉಳುಮೆ ಮಾಡಿ, ಭೂಮಿ ಹದವಾದ ತಕ್ಷಣ ಹಸಿರೆಲೆ

ಗೊಬ್ಬರ ಬಿತ್ತನೆ ಮಾಡಿ ನಂತರ ಉಳುಮೆ ಮಾಡಿ ಮಣ್ಣಿಗೆ ಸೇರಿಸುವುದರಿಂದ ಹಾಗೂ ಚೌಕು ಮಡಿ, ಸಮಪಾತಳಿ ಬೇಸಾಯ, ಇಳಿಜಾರು ಬದುಗಳು ಸಾದ್ಯವಾದಲ್ಲಿ ಕೃಷಿ ಹೊಂಡ ನಿರ್ಮಾಣ ಇತ್ಯಾದಿ ಒಣ ಬೇಸಾಯ ಹಾಗೂ ಜಲಾನಯನ ಅಭಿವೃದ್ದಿ ತಂತ್ರಜ್ಞಾನಗಳನ್ನು ಅಳವಡಿಸಿದರೆ ಭೂಸಾರ ಅಭಿವೃದ್ಧಿಯಾಗಿ ಕೃಷಿ ಭೂಮಿ ಒಂದು ಅತ್ಯಂತ ಉಪಯುಕ್ತ **"ಉತ್ಪಾದಕ ಆಸ್ತಿ"** (*Productive Asset)* ಯಾಗಿ ಪರಿವರ್ತನೆ ಹೊಂದಲಿದೆ. ಸರಿಯಾದ ರೀತಿಯಲ್ಲಿ ಕಳೆ ನಿಯಂತ್ರಣದಿಂದ ನೀರು ಕಳೆಗಳ ಪಾಲಾಗುವುದು ತಪ್ಪಿ ಸಂರಕ್ಷಣೆಯಾಗುತ್ತದೆ.

***ಹೀಗೆ MGNREGA ದಡಿಯಲ್ಲಿ ಮಣ್ಣು, ನೀರು ಸಂರಕ್ಷಣೆ ಆ ಮೂಲಕ 'ಉತ್ಪಾದಕ ಆಸ್ತಿ' ನಿರ್ಮಾಣದ ಸಾಧ್ಯತೆಯನ್ನು ಪುನರ್ ವ್ಯಾಖ್ಯಾನ ಮಾಡಿ ರಾಗಿ ಮತ್ತು ಜೋಳದ ಬೆಳೆಗಾರರಿಗೆ ಅನುಕೂಲ ಮಾಡಬೇಕಾಗಿದೆ.***

ಸಾವಯವ ವಸ್ತುಗಳಾದ ಹಸಿರು ಎಲೆ ಗೊಬ್ಬರ, ಎರೇ ಗೊಬ್ಬರ, ಕಾಂಪೋಸ್ಟ್ ಮುಂತಾದವುಗಳನ್ನು ಭೂಮಿಗೆ ಹೆಚ್ಚಿನ ಪ್ರಮಾಣದಲ್ಲಿ ಸೇರಿಸುವುದರಿಂದ ಭೂಸಾರ ಅಭಿವೃದ್ಧಿಯಾಗಿ ಇಳುವರಿ ಹೆಚ್ಚಾಗುವುದರಿಂದ ರೈತರು ಹೆಚ್ಚು ಹೆಚ್ಚು ಪ್ರದೇಶದಲ್ಲಿ ರಾಗಿ ಮತ್ತು ಜೋಳ ಬೆಳೆಯಲು ಮುಂದೆ ಬರುತ್ತಾರೆ. ಇದಕ್ಕಾಗಿ **ಸಾವಯವ ಭಾಗ್ಯ ಯೋಜನೆ ಎಲ್ಲಾ ರೈತರಿಗೆ** ವಿಸ್ತರಿಸುವುದು ಸೂಕ್ತ ಕ್ರಮವಾಗುತ್ತದೆ.

17. **ಸಮುದಾಯಕಗಳ ತೀವ್ರಾಸಕ್ತಿ:–** ದಕ್ಷಿಣದ ಹಳೆ ಮೈಸೂರು ಪ್ರಾಂತ್ಯದಲ್ಲಿ ರಾಗಿ ಮುದ್ದೆ ಮತ್ತು ಉತ್ತರ ಕರ್ನಾಟಕದಲ್ಲಿ ಜೋಳದ ರೊಟ್ಟಿ ಜನಪ್ರಿಯ ಆಹಾರಗಳಾಗಿವೆ. ಇವು ಬರಿದೇ ಆಹಾರವಲ್ಲ ರುಚಿ, ಪೌಷ್ಟಿಕತೆ, ಮೇವು ಒಟ್ಟಾರೆ ಗ್ರಾಮೀಣ ಬದುಕು ಸಂಸ್ಕೃತಿಗಳ ಅವಿಭಾಜ್ಯ ಅಂಗ. ಇಲ್ಲಿ ಸುಧಾರಿಸಿದ, ಹೈಬ್ರಿಡ್ ತಳಿಗಳಿಗಿಂತ ದೇಶೀಯ, ಪಾರಂಪರಿಕ ತಳಿಗಳಿಗೇ ಹೆಚ್ಚು ಆದ್ಯತೆ. ಹಾಗಾಗಿ ರೈತರು ಕನಿಷ್ಠ ಜಾಗದಲ್ಲಿ ಮನೆ ಉಪಯೋಗಕ್ಕಾದರೂ ಇವುಗಳನ್ನು ಬೆಳೆಯುತ್ತಿರುವರು. ಸರ್ಕಾರ ಮತ್ತು ಮಾರುಕಟ್ಟೆಗಳಿಂದ ಕಡೆಗಣಿಸಲ್ಪಟ್ಟಿರುವ ಈ ತೃಣ ಧಾನ್ಯಗಳು ರೈತಾಪಿ ವರ್ಗದ ಕೈತಪ್ಪಿ ಹೋಗದಂತೆ ತಡೆಯುವ ಗಂಭೀರ ಪ್ರಯತ್ನ ಹಲವು ಸ್ವಯಂ ಸೇವಾ ಸಂಸ್ಥೆಗಳಿಂದ ನಡೆಯುತ್ತಿದೆ. ಅವುಗಳಲ್ಲಿ ಆಂಧ್ರ–ಕರ್ನಾಟಕ ಗಡಿಯ ಮೇಡಕ್ ಜಿಲ್ಲೆಯಲ್ಲಿ ಕಾರ್ಯನಿರತವಾಗಿರುವ **"ಡೆಕ್ಕನ್ ಡೆವಲಪ್‌ಮೆಂಟ್ ಸಂಸ್ಥೆ"** (Deccan Development Society) ಮತ್ತು ಕರ್ನಾಟಕ–ತಮಿಳ್ನಾಡು ಗಡಿಯಲ್ಲಿ ಕೆಲಸ ಮಾಡುತ್ತಿರುವ **"ಗ್ರೀನ್ ಫೌಂಡೇಶನ್"** (GREEN Foundation) ಸಂಸ್ಥೆಗಳು ಮುಖ್ಯವಾಗಿರುತ್ತವೆ.

18. ಈ ಕಾರ್ಯವನ್ನು ರಾಷ್ಟ್ರವ್ಯಾಪಿ ವಿಸ್ತರಿಸಲು ಡೆಕ್ಕನ್ ಡೆವಲಪ್‌ಮೆಂಟ್ ಸಂಸ್ಥೆಯ ನೇತೃತ್ವದಲ್ಲಿ ರೈತರು, ವಿಜ್ಞಾನಿಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತಿತರರನ್ನೊಳಗೊಂಡ **"ತೃಣಧಾನ್ಯಗಳ ಭಾರತೀಯ ಜಾಲ**

*(Millet Network of India – MINI)* ಒಂದು ಅಸ್ತಿತ್ವದಲ್ಲಿರುತ್ತದೆ. ಈ ನೆಟ್ವನಲ್ಲಿ ಕೆಲ ವರ್ಷಗಳ ಹಿಂದೆ ಹೈದರಾಬಾದಿನಲ್ಲಿ ಒಂದು ರಾಷ್ಟ್ರೀಯ ಸಮ್ಮೇಳನ ನಡೆಸಿ ಹಲವು ಮಹತ್ತರದ ನಿರ್ಣಯಗಳನ್ನು ಕೈಗೊಳ್ಳಲಾಗಿರುತ್ತದೆ.

***ರಾಗಿ, ಜೋಳಗಳು ಸೇರಿದಂತೆ ತೃಣಧಾನ್ಯಗಳನ್ನು ಯೋಗ್ಯ ಬೆಂಬಲ ಬೆಲೆ ನೀಡಿ ಖರೀದಿಸಿ ವಿಕೇಂದ್ರಿಕೃತ ಪಡಿತರ ವ್ಯವಸ್ಥೆಯ ಮೂಲಕ ವಿತರಿಸಬೇಕೆನ್ನುವುದು ಅತ್ಯಂತ ಪ್ರಮುಖವಾದ ಘೋಷಣೆಯಾಗಿರುತ್ತದೆ.***

ರಾಜ್ಯದ ಅನ್ನಭಾಗ್ಯ ಯೋಜನೆಯ ಮೂಲಕ ಈ ಘೋಷಣೆ ಈಗಾಗಲೇ ಕಾರ್ಯರೂಪ ಪಡೆಯುವಂತಾಗಿದೆ.

## IV. ಇಳುವರಿ ಮತ್ತು ವೆಚ್ಚ:

19. ಪ್ರಮುಖ ಬೆಳೆಗಳ ಉತ್ಪಾದನಾ ವೆಚ್ಚವನ್ನು ಅಧಿಕೃತವಾಗಿ ಲೆಕ್ಕ ಹಾಕಿ ಒದಗಿಸಲು ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯದ ವ್ಯಾಪ್ತಿಯ **'ಆರ್ಥಿಕ ಮತ್ತು ಸಂಖ್ಯಾಶಾಸ್ತ್ರ ನಿರ್ದೇಶನಾಲಯ'** (Directorate of Economics and Statistics - DES) ಮತ್ತು ರಾಜ್ಯಸರ್ಕಾರದ ಕೃಷಿ ಇಲಾಖೆಯ **'ಕೃಷಿ ನಿರ್ವಹಣಾ ವಿಭಾಗ'**ಗಳು ಕಾರ್ಯನಿರ್ವಹಿಸುತ್ತಿವೆ. ಈ ಎರಡು ಅಧಿಕೃತ ಮೂಲಗಳಿಂದ 2010-11 ರವರೆಗೆ ಅಂಕಿ ಅಂಶಗಳು ಲಭ್ಯವಿರುತ್ತವೆ. ಡಿ.ಇ.ಎಸ್. ಮೂಲದ ಅಂಕಿ ಅಂಶಗಳು ಇಡೀ ರಾಜ್ಯದ ಸರಾಸರಿ ಪ್ರಮಾಣ. ರಾಜ್ಯಸರ್ಕಾರದ್ದು ಕೃಷಿ ವಲಯಗಳ ಮಟ್ಟದ ಉತ್ಪಾದನಾ ವೆಚ್ಚ. ಈ ಎರಡೂ ಮೂಲಗಳ ರಾಗಿ ಮತ್ತು ಜೋಳಗಳ ಉತ್ಪಾದಕತೆ ಮತ್ತು ವೆಚ್ಚದ ವಿವರಗಳನ್ನು ಪಟ್ಟಿ–1ರಲ್ಲಿ ನೀಡಿದ್ದು ಅಂಕಿ ಅಂಶಗಳಲ್ಲಿನ ವ್ಯತ್ಯಾಸಗಳು ಅಧಿಕವಾಗಿರುತ್ತವೆ. ಮಣ್ಣು, ಹವಾಮಾನ, ಮಳೆಯ ಏರು ಪೇರು ಈ ರೀತಿಯ ವ್ಯತ್ಯಾಸಗಳಿಗೆ ಕಾರಣಗಳಾಗಿವೆ.

20. **ಇಳುವರಿ:** ಇತ್ತೀಚಿಗಿನ ವರ್ಷ (2013-14)ಕ್ಕೆ ಸಂಬಂಧಿಸಿದ ಹಾಗೆ ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ ಕೃಷಿ ಅರ್ಥಶಾಸ್ತ್ರ ವಿಭಾಗದ ಎರಡು ಅಧ್ಯಯನಗಳ ಪ್ರಕಾರ, ರಾಗಿಯ ಸರಾಸರಿ ಇಳುವರಿ ಎಕರೆಗೆ 8 ಕ್ವಿಂಟಲ್ (ಬೆಂಗಳೂರು ಗ್ರಾಮಾಂತರ) ಮತ್ತು ಹಿಂಗಾರು ಬಿಳಿ ಜೋಳದ ಇಳುವರಿ 5 ಕ್ವಿಂಟಲ್ (ಬಿಜಾಪುರ) ಗಳಾಗಿರುತ್ತದೆ. ವಿವರಗಳು ಮುಂದಿನ ಪಟ್ಟಿಯಲ್ಲಿದೆ.

21. ಆದರೆ ವೈಜ್ಞಾನಿಕ ರೀತಿಯಲ್ಲಿ ವಿವಿಧ ಕಾಲಗಳಿಗೆ ಸೂಕ್ತವಾದ ಸುಧಾರಿಸಿದ ತಳಿಗಳ ಕೃಷಿ ಕೈಗೊಂಡು, ಸಾಧ್ಯವಾದೆಡೆಗಳಲ್ಲಿ ಸಂದಿಗ್ಧ ಹಂತಗಳಲ್ಲಿ ಸ್ವಲ್ಪ ನೀರಾವರಿ ಒದಗಿಸಿ ಚೌಕುಮಡಿ (Compartmental Bunding) ಯಂತಹ ಮಣ್ಣು/ನೀರು ಸಂರಕ್ಷಣೆ ಕೈಗೊಂಡಿದ್ದೇ ಆದಲ್ಲಿ ರಾಗಿ ಇಳುವರಿಯನ್ನು ಎಕರೆ

ಒಂದಕ್ಕೆ 12 ರಿಂದ 15 ಕ್ವಿಂಟಾಲ್ ಪಡೆಯಬಹುದಾಗಿದೆ. ಮುಂಗಾರು ತಡವಾಗಿ ಆಗಸ್ಟ್‌ನಲ್ಲಿ ಬಿತ್ತನೆಯಾದರೂ GPU48 ರಾಗಿ ತಳಿಯಿಂದ ಸರಾಸರಿ ಎಕರೆಗೆ 14 ಕ್ವಿಂಟಲ್ ಇಳುವರಿ ಪಡೆಯಬಹುದು.

22. ಇದರಂತೆ ಸಾವಯವ ಗೊಬ್ಬರವನ್ನೂ ಸೇರಿಸಿ ಸಮಗ್ರ ರೀತಿಯಲ್ಲಿ ಪೋಷಕಾಂಶ ನೀಡಿ, ಮಣ್ಣು ಮತ್ತು ನೀರು ಸಂರಕ್ಷಣೆ ಕೈಗೊಂಡಿದ್ದೇ ಆದಲ್ಲಿ ಎರೆಮಣ್ಣಿನ ಭೂಮಿಯಲ್ಲಿ ಹಿಂಗಾರಿನಲ್ಲಿ 8 ಕ್ವಿಂಟಲ್‌ನಷ್ಟು ಬಿಳಿ ಜೋಳದ ಇಳುವರಿ ಬರುವುದು ವರದಿಯಾಗಿರುತ್ತದೆ. ಚೌಕು ಮಡಿಗಳನ್ನು ಮಾಡಿ ನೀರು ಸಂರಕ್ಷಣೆ ಕೈಗೊಂಡರೆ ಶೇ 45ರಷ್ಟು, ಸಂದಿಗ್ದ ಹಂತದಲ್ಲಿ ನೀರು ನೀಡಿದರೆ ಇಳುವರಿ ಶೇ 40ರಷ್ಟು ಅಧಿಕವಾಗುವುದು ವರದಿಯಾಗಿದೆ. ಧಾರವಾಡ ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ಈಗಾಗಲೇ ಬಿಡುಗಡೆಗೆ ಸಿದ್ಧವಾಗಿರುವ SPU-2217 ಹಿಂಗಾರು ಬಿಳಿ ಜೋಳ 10 ಕ್ವಿಂಟಲ್‌ವರೆಗೂ ಇಳುವರಿ ನೀಡಬಲ್ಲುದಾಗಿದೆ. ಜೊತೆಗೆ ಒಳ್ಳೆಯ ಗುಣಮಟ್ಟದ ಮೇವೂ ದೊರಕಲಿದೆ.

***23. ರಾಗಿ ಮತ್ತು ಜೋಳದಂತಹ ಬೆಳೆಗಳ ಉತ್ಪಾದಕತೆ ಮಳೆಯ ಪ್ರಾರಂಭ, ಪ್ರಮಾಣ ಮತ್ತು ಹಂಚಿಕೆ ಮೇಲೆ ಅವಲಂಬಿತವಾಗಿ ತೀವ್ರವಾಗಿ ಏರುಪೇರಾಗುತ್ತದೆ. ಈ ಹಿಂದೆ ತಿಳಿಸಿದಂತೆ ಸದ್ಯದ ವರದಿಗೆ ಎಕರೆ ಒಂದಕ್ಕೆ ರಾಗಿ ಇಳುವರಿ 10 ಕ್ವಿಂಟಲ್ ಮತ್ತು ಜೋಳದ ಇಳುವರಿ 7 ಕ್ವಿಂಟಲ್ ಎಂದು ಗುರಿ ಇಟ್ಟುಕೊಳ್ಳಲಾಗಿದೆ.***

24. **ಉತ್ಪಾದನಾ ವೆಚ್ಚ:** ಬೆಳೆಯೊಂದರ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಲೆಕ್ಕ ಹಾಕುವಾಗ ರೈತರು **'ನೇರವಾಗಿ ಭರಿಸುವ'** ಬೀಜ, ರಸಗೊಬ್ಬರ, ಕ್ರಿಮಿಕೀಟ ನಾಶಕಗಳು ಇತ್ಯಾದಿ ಪರಿಕರಗಳ ಖರ್ಚು, ಭೂ ಕಂದಾಯ, ವಿಮೆ ಪ್ರೀಮಿಯಂ, ಹಾಗೆ ಕೂಲಿ, ಕಾರ್ಮಿಕರ ಶ್ರಮದ ವೆಚ್ಚ, ಜೊತೆಗೆ ಈ ಎಲ್ಲಾ ವೆಚ್ಚಗಳ ಮೇಲಿನ ಬಡ್ಡಿ ಪ್ರಮಾಣ ಸೇರಿಸಬೇಕು.

25. ಇದರ ಜೊತೆಗೆ **ಅಪ್ರತ್ಯಕ್ಷವಾಗಿ ಭರಿಸುವ** ಟ್ರ್ಯಾಕ್ಟರ್, ಪಂಪ್‌ಸೆಟ್ ಇತ್ಯಾದಿ ಯಂತ್ರ, ಕಟ್ಟಡ, ಬೇಲಿಗಳ **'**ಸವಕಳಿ**'** (Depreciation) ಕೂಡ ವೆಚ್ಚವಾಗಿ ಪರಿಗಣಿಸಬೇಕು. ಕೇಂದ್ರದ ಡಿ.ಇ.ಎಸ್ (DES) ಈ ಎಲ್ಲಾ ವೆಚ್ಚಗಳ ಜೊತೆಗೆ ಸ್ವಂತ ಭೂಮಿಯ ಗೇಣಿ (Land Rent) ಮತ್ತು ನಿರ್ವಹಣಾ ವೆಚ್ಚಗಳಂತಹ **'**ಅವಕಾಶ ವೆಚ್ಚ**'** (Opportunity Cost) ಗಳನ್ನೂ ಸೇರಿಸಿ ಪ್ರಮುಖ ಬೆಳೆಗಳ ಸಮಗ್ರ **ಉತ್ಪಾದನಾ ವೆಚ್ಚ** (Cost $C_3$)ವನ್ನು ಲೆಕ್ಕ ಹಾಕಲಾಗುತ್ತದೆ.

***26. ಈ ಲೆಕ್ಕಾಚಾರಕ್ಕೆ ರೈತರ ಆಯ್ಕೆ, ಸಂಖ್ಯೆ (sample size) ವಿವಿಧ ವರ್ಗ ಪ್ರದೇಶಗಳ ಪ್ರಾತಿನಿಧ್ಯ ಇತ್ಯಾದಿ 'ಸಮೀಕ್ಷಾ ವಿಧಾನ' (Survey Design) ವ್ಯವಸ್ಥಿತವಾಗಿದ್ದಷ್ಟೂ ಅಂಕಿ ಅಂಶಗಳು ನಿಖರವೂ, ಸಮ್ಮತವೂ ಆಗುತ್ತವೆ.***

27. ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ಮೂಲದ ಅಧ್ಯಯನಗಳ ಪ್ರಕಾರ ಇತ್ತೀಚಿಗಿನ ವರ್ಷದಲ್ಲಿ ಪ್ರತಿ ಎಕರೆ ಪ್ರದೇಶದಲ್ಲಿ ರಾಗಿ ಬೆಳೆಯಲು ತಗುಲುವ ಸಮಗ್ರ ವೆಚ್ಚ (Cost $C_3$) ರೂ. 19,646/- ಮತ್ತು ಹಿಂಗಾರು ಬಿಳಿ ಜೋಳ (ಮಾಲ್ದಂಡಿ ತಳಿ) ಬೆಳೆಯಲು ರೂ. 7,739/- ರೂ.ಗಳಾಗಿರುತ್ತದೆ. ಇದರಲ್ಲಿ ಶೇ 40-43 ರಷ್ಟು ಶ್ರಮಕ್ಕೂ, ಶೇ 22-25 ರಷ್ಟು ಸ್ವಂತ ಭೂಮಿಯ ಮೇಲಿನ ಗೇಣಿಗೂ ತಗಲುತ್ತದೆ. ಪರಿಕರಗಳ ಬಗ್ಗೆ ರಾಗಿಯಲ್ಲಿ ಶೇ 35ರಷ್ಟು ವೆಚ್ಚವಾಗಿದ್ದರೆ ಜೋಳದಲ್ಲಿ ಇದು ಶೇ 8% ರಷ್ಟಿರುತ್ತದೆ. (*ಅನುಬಂಧ 6*)

*28.* ***ಈ ಪ್ರಕಾರ ಮೇವು, ಮಿಶ್ರ ಬೆಳೆಗಳಲ್ಲಿನ ಆದಾಯವನ್ನು ಕಳೆದು ಕ್ವಿಂಟಲ್ ಒಂದರ ಸಮಗ್ರ ಉತ್ಪಾದನಾ ವೆಚ್ಚ (Cost $C_3$) ರಾಗಿಯಲ್ಲಿ ರೂ 2,306 ಮತ್ತು ಜೋಳದಲ್ಲಿ ರೂ. 1,834 ರಷ್ಟಾಗಲಿದೆ.***

29. ವಿವಿಧ ಸ್ಥಳಗಳಲ್ಲಿ ಜರುಗಿದ ರೈತರೊಡನೆ ಚರ್ಚೆಯಲ್ಲಿ ಮೇಲಿನ ರಾಗಿ ಉತ್ಪಾದನಾ ವೆಚ್ಚದ ಬಗ್ಗೆ ಸ್ವಲ್ಪ ಸಹಮತ ಮೂಡಿ ಬಂದಿರುತ್ತದೆ. ಜೋಳದ ಉತ್ಪಾದನಾ ವೆಚ್ಚ ಕೇಂದ್ರ ಸರ್ಕಾರದ ಡಿ.ಇ.ಎಸ್. ಮೂಲದ ಪ್ರಕಾರ 2010-11ರಲ್ಲೇ ಪ್ರತಿ ಕ್ವಿಂಟಲ್‌ಗೆ ರೂ. 1992ರಷ್ಟಿರುತ್ತದೆ *(ಪಟ್ಟಿ–1).* ಹಾಗಾಗಿ, ಜೋಳದ ಉತ್ಪಾದನಾ ವೆಚ್ಚ ಮೇಲಿನ ಲೆಕ್ಕಾಚಾರಕ್ಕಿಂತಲೂ ಅಧಿಕವಾಗಿರುತ್ತದೆನ್ನುವುದು ಎಲ್ಲೆಡೆ ವ್ಯಕ್ತವಾದ ಅಭಿಪ್ರಾಯ.

30. ಕೃಷಿ ಇಲಾಖೆಯ ಕ್ಷೇತ್ರ ನಿರ್ವಾಹಣ ಘಟಕದವರು 2010-11ರಲ್ಲಿ ಮಾಡಿರುವ ಉತ್ಪಾದನಾ ವೆಚ್ಚದ ಲೆಕ್ಕವನ್ನು ಆಧರಿಸಿ, 2014-15ನೇ ಸಾಲಿನಲ್ಲಿ ಮಾನವ ಕೂಲಿ ದಿನಕ್ಕೆ ರೂ. 250/- ಎತ್ತುಗಳ ಕೂಲಿ ರೂ. 600/-, ಟ್ರ್ಯಾಕ್ಟರ್ ಬಾಡಿಗೆ ಗಂಟೆಗೆ ರೂ. 700/– ಮತ್ತು ಇನ್ನಿತರ ಪರಿಕರಗಳ ಚಾಲ್ತಿ ದರ ಹಾಗೂ ಭೂ ಗೇಣಿ ಚಾಲ್ತಿ ದರ ಪರಿಗಣಿಸಿ ಆಯೋಗದ ಸದಸ್ಯರಾದ ಶ್ರೀ ಹನುಮನ ಗೌಡ ಬೆಳಗುರ್ಕಿಯವರು ಪರೀಷ್ಕೃತ ಉತ್ಪಾದನಾ ವೆಚ್ಚ ನೀಡಿರುತ್ತಾರೆ. ಇವರ ಪ್ರಕಾರ ರಾಗಿ ಉತ್ಪಾದನೆ ವೆಚ್ಚ ಎಕರೆಗೆ ರೂ 22,340/- ಮತ್ತು ಬಿಳಿ ಜೋಳ ಉತ್ಪಾದನೆ ಎಕರೆಗೆ ರೂ. 17,180/- ಆಗುತ್ತದೆ. ರಾಗಿ ಇಳುವರಿ ಎಕರೆಗೆ 7.5 ಕ್ವಿಂಟಾಲ್ ಮತ್ತು ಬಿಳಿಜೋಳದ ಇಳುವರಿ ಎಕರೆಗೆ 5.5 ಕ್ವಿಂಟಾಲ್‌ಗಳಾಗಿದ್ದು, ಈ ಪ್ರಕಾರ ***ಈ ಎರಡು ಬೆಳೆಗಳ ಉತ್ಪಾದನಾ ವೆಚ್ಚ ಕ್ವಿಂಟಾಲ್‌ಗೆ ರೂ.2,700/- ಗಳಾಗುತ್ತದೆ.*** ವಿವರ *ಅನುಬಂಧ–7*ರಲ್ಲಿ

## V. ಬೆಲೆ ಮತ್ತು ಲಾಭದಾಯಕತೆ:

31. 2013–14 ಸಾಲಿನಲ್ಲಿ ಕೇಂದ್ರ ಸರ್ಕಾರ ರಾಗಿ ಮತ್ತು ಬಿಳಿ ಜೋಳಗಳಿಗೆ ಕ್ರಮವಾಗಿ ರೂ.1,500/– ಮತ್ತು ರೂ. 1,520/– ಕ್ವಿಂಟಲ್ ಒಂದಕ್ಕೆ ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸಿರುತ್ತದೆ. ರಾಜ್ಯ ಸರ್ಕಾರ ಅನ್ನಭಾಗ್ಯ ಯೋಜನೆ ಅನುಷ್ಠಾನಕ್ಕೆ ಖರೀದಿ ಉದ್ದೇಶದಿಂದ ಇವೆರೆಡರ ಬೆಲೆಯನ್ನು ರೂ. 1,800/– ಕ್ಕೆ ಏರಿಸಿರುತ್ತದೆ.

32. ಹಿಂದಿನ ಪಟ್ಟಿಯಲ್ಲಿ ತಿಳಿಸಿರುವಂತೆ ಈ ಎರಡೂ ಉತ್ಪನ್ನಗಳ ಉತ್ಪಾದನಾ ವೆಚ್ಚ ($C_3$) 2013–14ರಲ್ಲಿ 2,000 ರೂ. ಮೀರಿರುತ್ತದೆ. ಆದರೆ ರೈತರಿಗೆ ಮುಕ್ತ ಮಾರುಕಟ್ಟೆಯಲ್ಲಿ ದೊರೆತ ಬೆಲೆ ಕ್ವಿಂಟಲ್‌ಗೆ ರೂ. 2,000 ಮೀರಿರುವುದಿಲ್ಲ.

33. ರಾಜ್ಯದ ಪ್ರಮುಖ ಎ.ಪಿ.ಎಂ.ಸಿ ಮಾರುಕಟ್ಟೆಯಲ್ಲಿ 2013–14ರ ಸಾಲಿನಲ್ಲಿ ಬಂದಂತಹ ಆವಕ ಮತ್ತು ಮಾದರಿ ಬೆಲೆಗಳನ್ನು ಅವಲೋಕಿಸಿದಾಗ ಈ ಎರಡು ಉತ್ಪನ್ನಗಳ ಧಾರಣೆ ಕ್ವಿಂಟಾಲ್‌ಗೆ 2000 ಕ್ಕಿಂತ ಕಡಿಮೆಯೇ ಇರುತ್ತದೆ. *(ಅನುಬಂಧ–8).*

***ಅಂದರೆ ಸರ್ಕಾರ ಮತ್ತು ಮಾರುಕಟ್ಟೆ ಎರಡೂ ಕಡೆಯಲ್ಲೂ ರಾಗಿ ಮತ್ತು ಜೋಳ ಬೆಳೆದ ರೈತರಿಗೆ ಲಾಭದಾಯಕ ಬೆಲೆ ದೊರಕಿರುವುದಿಲ್ಲ ಎಂದಾಯ್ತು.***

34. ಆಶ್ಚರ್ಯವೆಂದರೆ ಒಟ್ಟು ಉತ್ಪಾದನೆಯಲ್ಲಿ ಈ ಎರಡು ಉತ್ಪನ್ನಗಳು ವ್ಯವಸ್ಥಿತವಾಗಿ APMC ಮಾರುಕಟ್ಟೆ ವ್ಯಾಪ್ತಿಯಲ್ಲಾದ ಮಾರಾಟ ಪ್ರಮಾಣ ಅತ್ಯಲ್ಪವಾಗಿರುವುದು. ಕೃಷಿ ಇಲಾಖೆ ವರದಿ ಪ್ರಕಾರ ಇತೀಚೆಗಿನ ವರ್ಷದಲ್ಲಿ 14 ಲಕ್ಷ ಟನ್‌ಗಳಷ್ಟು ರಾಗಿ ಮತ್ತು ಇಷ್ಟೇ ಪ್ರಮಾಣದ ಜೋಳ ಉತ್ಪಾದನೆಯಾಗಿರುತ್ತದೆ. ಆದರೆ, ಮಾರಾಟ ಇಲಾಖೆಯ ಎ.ಪಿ.ಎಂ.ಸಿ ವ್ಯಾಪ್ತಿಯಲ್ಲಾದ ವ್ಯವಹಾರ ರಾಗಿ 4.73 ಲಕ್ಷ ಕ್ವಿಂಟಲ್ ಜೋಳ 3.60 ಲಕ್ಷ ಕ್ವಿಂಟಲ್‌ಗಳು ಮಾತ್ರ!

***ಒಟ್ಟು ಉತ್ಪಾದನೆಯಲ್ಲಿ ಶೇ.5ರಷ್ಟು ಪ್ರಮಾಣ ಕೂಡ ರಾಗಿ ಮತ್ತು ಜೋಳದ ಧಾನ್ಯಗಳು ವ್ಯವಸ್ಥಿತ ಮಾರುಕಟ್ಟೆ ಪರಿಧಿಯೊಳಗೆ ಮಾರಾಟವಾಗುತ್ತಿಲ್ಲ ಎಂದಾಯ್ತು.***

35. ರಾಗಿ ಮತ್ತು ಜೋಳದಂತಹ ಬೆಳೆಗಳ ಬಗ್ಗೆ ಯೋಗ್ಯ ಬೆಲೆ ನಿರ್ಧರಿಸಿ, ಖರೀದಿ ಮಾಡಲು ಇವುಗಳ ಉತ್ಪಾದನೆ, ಮಾರಾಟ ಮಿಗಿತ, ಮಾರಾಟ ಬೆಲೆ ಮತ್ತು ಪ್ರಮಾಣ ಇತ್ಯಾದಿಗಳ ಬಗ್ಗೆ ನಿಖರವಾದ ಮಾಹಿತಿ, ಅಂಕಿ–ಅಂಶಗಳು ಅತ್ಯಗತ್ಯವಾಗಿದ್ದು ಇವುಗಳ ಕೊರತೆ ಇಲ್ಲಿ ಎದ್ದು ಕಾಣುತ್ತಿದೆ.

36. ಇವೆಲ್ಲಕ್ಕಿಂತ ಮಿಗಿಲಾಗಿ ಇಳುವರಿ ಅಧಿಕ ನೀಡುವ ಹಾಗೇ ವ್ಯವಸ್ಥಿತ ಮಾರುಕಟ್ಟೆ ಮತ್ತು ಅಧಿಕ ಬೆಲೆ ಸಿಗುವ ಮುಸುಕಿನ ಜೋಳ, ಕಡಲೆ ಮತ್ತು ಹತ್ತಿಯಂತಹ ವಾಣಿಜ್ಯ ಬೆಳೆಗಳು ರಾಗಿ ಮತ್ತು ಹಿಂಗಾರು ಜೋಳ ಬೆಳೆಯುವ ಪ್ರದೇಶವನ್ನು ಶೀಘ್ರಗತಿಯಲ್ಲಿ ಆಕ್ರಮಿಸಿಕೊಳ್ಳುತ್ತಿವೆ.

37. ರಾಜ್ಯ ಕೃಷಿ ಇಲಾಖೆಯ ಇತ್ತೀಚಿಗಿನ ವರದಿ (2010–11)ಯ ಪ್ರಕಾರ ರಾಜ್ಯದಲ್ಲಿ ಮುಸುಕಿನ ಜೋಳ ಮತ್ತು ಹತ್ತಿ ಬೆಳೆಯುವ ರೈತ ಹಾಕಿದ ಒಟ್ಟು ವೆಚ್ಚ (Cost $C_3$)ದ ಮೇಲೆ ಪ್ರತಿ ಒಂದು ರೂ.ಗೆ ಕ್ರಮವಾಗಿ ರೂ.1.18 ಮತ್ತು 1.29 ರೂ. ಒಟ್ಟು ಆದಾಯ (Gross Income) ದೊರಕಿದ್ದರೆ, ರಾಗಿಯಲ್ಲಿ ಈ ಆದಾಯ ವೆಚ್ಚ ಪ್ರಮಾಣ (B:C Ratio) ಕೇವಲ ರೂ.1.06 ಮಾತ್ರ. ಹಾಗೇ ಇನ್ನೊಂದು ಅಧ್ಯಯನ (ಶ್ರೀ ಸತೀಶ್ ಕುಮಾರ್ 2014) ಪ್ರಕಾರ ಈ ಪ್ರಮಾಣ ಕಡಲೆಯಲ್ಲಿ 1.16 ಆಗಿದ್ದರೆ, ಬಿಳಿ ಜೋಳದಲ್ಲಿ 1.13 ಆಗಿರುತ್ತದೆ.

38. ಹತ್ತಿ ಮತ್ತು ಮುಸುಕಿನ ಜೋಳಗಳು ನೀರು, ರಸಗೊಬ್ಬರ, ಕ್ರಿಮಿಕೀಟನಾಶಕಗಳನ್ನು ಅತೀಯಾಗಿ ಬೇಡುವಂತಹ ದುಭಾರಿ ವೆಚ್ಚದ **'ಅಸ್ಥಿರ'** (Unsustainable) ವಾಣಿಜ್ಯ ಬೆಳೆಗಳು. ಇವುಗಳ ಬೆಲೆ ದೇಶ ವಿದೇಶಗಳ ಮಾರುಕಟ್ಟೆ ಮೇಲೆ ಅವಲಂಬಿತವಾಗಿ ಸದಾ ಏರಿಳಿಯುತ್ತಿರುತ್ತವೆ ಎನ್ನುವುದನ್ನೂ ಗಮನದಲ್ಲಿಟ್ಟುಕೊಳ್ಳಬೇಕು.

39. ***ನ್ಯಾಯಯುತ ಮತ್ತು ಲಾಭದಾಯಕ ಬೆಲೆ (Fair and Remunarative Price): ಇವೆಲ್ಲಕ್ಕಿಂತ ಮುಖ್ಯವಾಗಿ ಖ್ಯಾತ ಕೃಷಿ ವಿಜ್ಞಾನಿ ಡಾ. ಸ್ವಾಮಿನಾಥನ್ ಸೂಚಿಸಿರುವಂತೆ ಯಾವುದೇ ಒಂದು ಕೃಷಿ ಉತ್ಪನ್ನಕ್ಕೆ ರೈತ ನೇರವಾಗಿ ಮತ್ತು ಅಪ್ರತ್ಯಕ್ಷವಾಗಿ ಭರಿಸಿದ ವೆಚ್ಚಗಳ ಮೇಲೆ ಕನಿಷ್ಟ ಶೇ 50ರಷ್ಟು ಅಧಿಕ ಬೆಲೆ ಸಿಗುವಂತಾಗಬೇಕು.***

40. ಸರ್ಕಾರದ ಎಲ್ಲಾ ಸವಲತ್ತು ರಿಯಾಯ್ತಿ, ಪ್ರೋತ್ಸಾಹಗಳ ಜೊತೆಗೆ ರಾಗಿ, ಜೋಳದಂತಹ ಸಿರಿ ಧಾನ್ಯಗಳು, ನೀಡುವ ಬಹುವಿಧದ ಭದ್ರತೆಗೆ ನೇರವಾಗಿ ಪ್ರತಿಫಲ ನೀಡುವ **"ಆದಾಯ ವರ್ಗಾವಣೆ"** (Income Transfer) ಯೋಜನೆಗಳು ಈ ನಿಟ್ಟಿನಲ್ಲಿ ಅತ್ಯಗತ್ಯವಾಗಿವೆ.

## ಪಟ್ಟಿ – 1

*ರಾಗಿ ಮತ್ತು ಜೋಳಗಳ ಉತ್ಪಾದನಾ ವೆಚ್ಚ ಮತ್ತು ಬೆಲೆ ವಿವಿಧ ಮೂಲಗಳಿಂದ (ಎಕರೆವಾರು)*

| ಕ್ರ. ಸಂ. | ಮೂಲ | ವರ್ಷ | ರಾಗಿ | ಜೋಳ |
|---|---|---|---|---|
| 1. | **ಡಿ.ಇ.ಎಸ್ ಕೇಂದ್ರ ಸರ್ಕಾರ, ನವ ದೆಹಲಿ**[1]<br>ಅ) ಇಳುವರಿ (ಕ್ವಿಂಟಲ್)<br>ಆ) ಒಟ್ಟು ವೆಚ್ಚ ($C_3$) (ರೂ)<br>ಇ) ಗೇಣಿ (ರೂ)<br>ಈ) ಕ್ವಿಂಟಾಲ್ ವೆಚ್ಚ (ರೂ)<br>ಉ) ಬೆಂಬಲ ಬೆಲೆ (ರೂ/ಕ್ವಿ)<br>ಊ) ಮಾರುಕಟ್ಟೆ ಬೆಲೆ (ರೂ/ಕ್ವಿ.) | 2010–11 | (*ರಾಜ್ಯದ ಸರಾಸರಿ*)<br>6.32<br>12,978<br>1,702<br>1,566<br>613<br>843 | (*ರಾಜ್ಯದ ಸರಾಸರಿ*)<br>2.66<br>6,228<br>1,464<br>1,992<br>900<br>2,056 |
| 2. | **ಕೃಷಿ ಇಲಾಖೆ ರಾಜ್ಯಸರ್ಕಾರ, ಬೆಂಗಳೂರು**[2]<br>ಅ) ಇಳುವರಿ (ಕ್ವಿಂಟಲ್)<br>ಆ) ಒಟ್ಟು ವೆಚ್ಚ (c3) (ರೂ)<br>ಇ) ಗೇಣಿ (ರೂ)<br>ಈ) ಕ್ವಿಂಟಾಲ್ ವೆಚ್ಚ (ರೂ)<br>ಉ) ಬೆಂಬಲ ಬೆಲೆ (ರೂ/ಕ್ವಿ)<br>ಊ) ಮಾರುಕಟ್ಟೆ ಬೆಲೆ (ರೂ/ಕ್ವಿ.) | 2010–11 | (*ವಲಯವಾರು ಸರಾಸರಿ ಮುಂಗಾರು, ಮಳೆ ಆಶ್ರಯ HYV*)<br>7.57<br>10,998<br>2,904<br>1,228<br>613<br>1,319 | (*ವಲಯವಾರು ಸರಾಸರಿ ಮುಂಗಾರು, ಮಳೆ ಆಶ್ರಯ HYV*)<br>8.11<br>10,474<br>1,897<br>1,711<br>900<br>856 |
| 3. | **ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು**<br>ಅ) ಇಳುವರಿ<br>ಆ) ಒಟ್ಟು ವೆಚ್ಚ (c3) (ರೂ)<br>ಇ) ಗೇಣಿ (ರೂ)<br>ಈ) ಕ್ವಿಂಟಲ್ ವೆಚ್ಚ (ರೂ)<br>ಉ) ಬೆಂಬಲ ಬೆಲೆ (ರೂ/ಕ್ವಿ.)<br>ಊ) ಮಾರುಕಟ್ಟೆ ಬೆಲೆ (ರೂ/ಕ್ವಿ.) | 2013–14 | (*ಬೆಂಗಳೂರು ಗ್ರಾಮಾಂತರ, ಮುಂಗಾರು, ಮಳೆ ಆಶ್ರಯ HYV*)[1]<br>8<br>19,646<br>2,000<br>2,306<br>1,800<br>2,000 | (*ಬಿಜಾಪುರ, ಹಿಂಗಾರು, ಮಾಲ್ದಂಡಿ ಮಳೆ ಆಶ್ರಯ*)[2]<br>5.18<br>7,739<br>2,333<br>1,834<br>1,800<br>1,520 |

1. *Directorate of Economics & Statistics (DES) (2014), Agricultural Statistics at a Glance 2013-14, Ministry of Agriculture, GOI, New Delhi.*
2. *Karnataka State Department of Agriculture (2010-11), Region wise Cost of Cultivation of Crops, GOK, Bangalore*
3. *ಡಾ. ಎಂ.ಜಿ. ಚಂದ್ರಕಾಂತ್ ಮತ್ತಿತರರು, ಕೃಷಿ ಅರ್ಥಶಾಸ್ತ್ರ ವಿಭಾಗ, ಬೆಂಗಳೂರು 08/08/2014ರ ಕಾರ್ಯಾಗಾರದಲ್ಲಿ ಮಂಡಿಸಿದ ಫಲಿತಾಂಶ.*
4. *ಶ್ರೀ ಸತೀಶ್ ಕುಮಾರ್, 2014ರಲ್ಲಿ ಕೃಷಿ ಅರ್ಥಶಾಸ್ತ್ರ ವಿಭಾಗ, ಬೆಂಗಳೂರು, An Economic Analysis of Rabi, Jowar cultivation in Semi Arid Region of Karnataka ಸ್ನಾತಕೋತ್ತರ ಸಂಶೋಧನಾ ಫಲಿತಾಂಶ.*

# “ಅನ್ನ ಭಾಗ್ಯದಿಂದ ಸುಸ್ಥಿರ ಕೃಷಿಯೆಡೆಗೆ”

***ಕರ್ನಾಟಕದಲ್ಲಿ ರಾಗಿ ಮತ್ತು ಜೋಳ ಆಧಾರಿತ ಆಹಾರ ಮತ್ತು ಕೃಷಿ ವ್ಯವಸ್ಥೆಗಳನ್ನು ಗಟ್ಟಿ ಮಾಡಲು 'ಕರ್ನಾಟಕ ಕೃಷಿ ಬೆಲೆ ಆಯೋಗದ' ಬೆಲೆ ಮತ್ತು ಬೆಲೆಯೇತರ ಬಹು ಸ್ವರೂಪಿ ಶಿಫಾರಸ್ಸುಗಳು:***

## VI. ಬಹು ಸ್ವರೂಪಿ ಶಿಫಾರಸ್ಸುಗಳು:

ಕರ್ನಾಟಕ ಸರ್ಕಾರದ ಅನ್ನಭಾಗ್ಯದಂತಹ ಆಹಾರ ಭದ್ರತೆ ಕಾರ್ಯಕ್ರಮಕ್ಕಾಗಿ ಧಾನ್ಯಗಳನ್ನು ಖರೀದಿ ಮಾಡಲು ದಿನಾಂಕ 28/06/2014ರ ಆದೇಶ *(ಸಂಖ್ಯೆ ಅ.ನಾ.ಸ 31 ಆರ್.ಪಿ.ಆರ್ 2014 ಬೆಂಗಳೂರು)* ದಂತೆ 2014-15ನೇ ಸಾಲಿನ ಮುಂಗಾರು ಋತುವಿನಲ್ಲಿ ರಾಗಿ ಮತ್ತು ಬಿಳಿ ಜೋಳ (ಮಾಲ್ದಂಡಿ)ಗಳಿಗೆ ಬೆಂಬಲ ಬೆಲೆಯನ್ನು ಪ್ರತಿ ಕ್ವಿಂಟಾಲ್‌ಗೆ ರೂ.2,000/- ದಂತೆ ನಿಗದಿ ಪಡಿಸಿರುತ್ತದೆ (*ಅನುಬಂಧ 9*).

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಕಾರ್ಯಕ್ರಮವಾದ ಈ ಅನ್ನಭಾಗ್ಯ ಯೋಜನೆಗೆ ಅಧಿಕ ಪ್ರಮಾಣದ ರಾಗಿ ಮತ್ತು ಬಿಳಿ ಜೋಳ ಅಗತ್ಯವಿದ್ದು ಸಮರ್ಪಕ ರೀತಿಯಲ್ಲಿ ಬೆಂಬಲ ಬೆಲೆ, ಖರೀದಿ ಕಾರ್ಯಗಳನ್ನು ಕೈಗೊಂಡರೆ ಈ ಎರಡು ಬೆಳೆಗಳ ಕೃಷಿ ಅಭಿವೃದ್ಧಿಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಕೆಳಗಿನ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಕೃಷಿ ಬೆಲೆ ಆಯೋಗ ತನ್ನ ಬಹುಸ್ವರೂಪಿ ಶಿಫಾರಸ್ಸುಗಳನ್ನು ಮಂಡಿಸಲಿದೆ:

- ❖ ಸರ್ಕಾರ ಈಗ ಘೋಷಿಸಿರುವ ಬೆಂಬಲ ಬೆಲೆ ಕಳೆದ ಸಾಲಿಗಿಂತ ಕ್ವಿಂಟಾಲ್‌ಗೆ ರೂ. 200 ಹೆಚ್ಚಳವಾಗಿದ್ದರೆ ಈ ಸಾಲಿನ ಕೇಂದ್ರ ಸರ್ಕಾರದ **'ಕೃಷಿ ಉತ್ಪನ್ನಗಳ ವೆಚ್ಚ ಮತ್ತು ಬೆಲೆ ಆಯೋಗ** (CACP) ನಿರ್ಧರಿಸಿದ ಬೆಂಬಲ ಬೆಲೆಗಿಂತ ಶೇ. 26ರಷ್ಟು ಅಧಿಕವಾಗಿರುತ್ತದೆ.

- ❖ ***ಏರುತ್ತಿರುವ ಉತ್ಪಾದನಾ ವೆಚ್ಚ, ಪರ್ಯಾಯ ಲಾಭದಾಯಕ ಬೆಳೆಗಳತ್ತ ಒಲವು, ಕೃಷಿ ಕಾರ್ಮಿಕರ ಕೊರತೆ ಇತ್ಯಾದಿ ಅಡ್ಡಿ ಆತಂಕಗಳಿಂದಾಗಿ ರೈತರು ಸಹಜವಾಗಿ ಅಧಿಕ ಬೆಲೆ ಬಯಸುತ್ತಿರುವರು.***

- ❖ ಈ ಎರಡು ಧಾನ್ಯಗಳ ಉತ್ಪಾದನಾ ವೆಚ್ಚ, ಒಟ್ಟು ಉತ್ಪಾದನೆ, ಮಾರುಕಟ್ಟೆ ಆವಕ ಮತ್ತು ಬೆಲೆಗಳ ವರ್ತನೆ ಇತ್ಯಾದಿಗಳ ಬಗ್ಗೆ ನಿಖರ ಮಾಹಿತಿ ಮತ್ತು ಅಂಕಿ ಅಂಶಗಳ ಕೊರತೆಯಿರುತ್ತದೆ. ಜೊತೆಗೆ, ಈ ಸಾಲಿನ ರಾಗಿ ನಾಟಿ ಬಹುತೇಕ ಕೈಗೊಂಡಿದ್ದು ಹಿಂಗಾರು ಋತುವಿನಲ್ಲಿ ಬಿಳಿ ಜೋಳದ ಬಿತ್ತನೆಗೆ ರೈತರು ಈಗಾಗಲೆ ಸಿದ್ದತೆ ನಡೆಸಿರುವರು. ***ಹಾಗಾಗಿ ಈ ವರದಿ ಮಧ್ಯಂತರ ರೂಪದ್ದಾಗಿರುತ್ತದೆ.***

- ಇದರಿಂದಾಗಿ ಸರ್ಕಾರ ಘೋಷಿಸಿರುವ ಸದ್ಯದ ಬೆಂಬಲ ಬೆಲೆಯ ಜೊತೆಗೆ ಉತ್ಪಾದಕತೆ ಹೆಚ್ಚಳ, ಉದ್ಯೋಗ ಖಾತರಿ ಯೋಜನೆಯ ಸದುಪಯೋಗ, ಸ್ಥಳೀಯವಾಗಿ ಖರೀದಿ, ಶೇಖರಣೆ, ಶೀಘ್ರ ಹಣ ಪಾವತಿಯಂತಹ ***ಬೆಲೆಯೇತರ*** (**Non Price**) ***ಪ್ರೋತ್ಸಾಹಕ*** ಕಾರ್ಯಕ್ರಮಗಳನ್ನು 'ಕರ್ನಾಟಕ ಕೃಷಿ ಬೆಲೆ ಆಯೋಗ' ಶಿಫಾರಸ್ಸು ಮಾಡುತ್ತಿದೆ.

- ರಾಗಿ, ಜೋಳದಂತಹ ತೃಣ ಧಾನ್ಯಗಳ ಕೃಷಿ **'ಬಹು ವಿಧದ ಭದ್ರತೆ'**ಯನ್ನು ಸಮಾಜಕ್ಕೆ ನೀಡಲಿದ್ದು ಈ ನಿಟ್ಟಿನಲ್ಲಿ ರೈತರಿಗೆ ಕೃತಜ್ಞಾಪೂರ್ವಕವಾಗಿ **"ಪರಿಸರ ಮತ್ತು ಸಮಾಜ ಸೇವೆಗಳಿಗಾಗಿ ಪಾವತಿ"** *(Payment for Environment and Social Services)* ಯಂತಹ ವಿಚಾರದತ್ತ ಗಮನ ಹರಿಸಬೇಕಾಗಿದೆ.

- ***ಕೊಯಿಲಿನನಂತರ ಆವಕ ಪ್ರಾರಂಬವಾಗಿ ಮಾರುಕಟ್ಟೆ ಬೆಲೆ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆಗಿಂತ ಅಧಿಕವಾಗಿದ್ದಲ್ಲಿ, ಸಾಮಾನ್ಯ ಗ್ರಾಹಕರ ಹಿತರಕ್ಷಣೆಯನ್ನೂ ಗಮನದಲ್ಲಿಟ್ಟುಕೊಂಡು ಕನಿಷ್ಠ ಮಟ್ಟದ ಖರೀದಿಗಾಗಿ ಸ್ವಲ್ಪ ಪ್ರಮಾಣದ ಹೆಚ್ಚಳದ "ಪರಿವರ್ತನ ಶೀಲ ಬೆಂಬಲ ಬೆಲೆ"*** (**Flexible MSP**) ***ಯನ್ನೂ ಶಿಫಾರಸ್ಸು ಮಾಡಲಾಗಿದೆ.***

**ಆಯೋಗದ 25 ಬಹುಸ್ವರೂಪಿ ಶಿಫಾರಸ್ಸುಗಳನ್ನು 5 ಶೀರ್ಷಿಕೆಗಳ ಅಡಿಯಲ್ಲಿ ಈ ಕೆಳಗೆ ಕೊಡಲಾಗಿದ್ದು ಇದಕ್ಕೆ ಪೂರಕವಾಗಿ ಪ್ರಸ್ತಾವನೆ ಮತ್ತಿತರ ವಿಚಾರಗಳನ್ನು 5 ಮುಖ್ಯ ಶೀರ್ಷಿಕೆಗಳ ಅಡಿಯಲ್ಲಿ ಈ ಹಿಂದೆ ವಿವರಿಸಲಾಗಿದೆ.**

## A. ಉತ್ಪಾದನೆ ಅಧಿಕಗೊಳಿಸುವುದು:

**ಶಿಫಾರಸ್ಸು 1:** **ಇಳುವರಿ ಅಂತರ** *(Yield Gap)* **ಕಡಿಮೆ ಮಾಡುವುದು:** ಕ್ರಮ ಸಂಖ್ಯೆ 21 & 22 ರಲ್ಲಿ ತಿಳಿಸಿರುವಂತೆ ಸುಧಾರಿತ ತಳಿಗಳನ್ನು ನಾಟಿ ಮಾಡಿ ವೈಜ್ಞಾನಿಕ ರೀತಿಯಲ್ಲಿ ಕೃಷಿ ಮಾಡಿ ಸಂದಿಗ್ದ ಹಂತಗಳಲ್ಲಿ ಸ್ವಲ್ಪ ನೀರು ಕೊಟ್ಟು ***ರಾಗಿ ಮತ್ತು ಹಿಂಗಾರು ಜೋಳಗಳ ಇಳುವರಿಯನ್ನು ಅನುಕ್ರಮವಾಗಿ ಎಕರೆವಾರು ಕನಿಷ್ಠ 10 ಕ್ವಿಂಟಲ್ ಮತ್ತು 7 ಕ್ವಿಂಟಲ್‌ಗೆ ಏರಿಸಬೇಕು.*** ಈ ನಿಟ್ಟಿನಲ್ಲಿ ನಮ್ಮ ಸಂಶೋಧನೆ, ವಿಸ್ತರಣೆ ಮತ್ತು ಸರ್ಕಾರದ ಪ್ರೋತ್ಸಾಹ ಕಾರ್ಯಕ್ರಮಗಳು ತೀವ್ರ ಗಮನ ಹರಿಸಬೇಕು.

ಅಧಿಕ ಇಳುವರಿಯ ಜಿ.ಪಿ.ಯು 48 ರಾಗಿ ತಳಿ, ಎಸ್.ಪಿ.ಯು 2217 ಮುಂಗಾರು ಜೋಳದ ತಳಿಗಳನ್ನು ಶೀಘ್ರ ಬಿಡುಗಡೆ ಮಾಡಿ, ಅಗತ್ಯ ಪ್ರಮಾಣದ ಬೀಜ

ಸಿಗುವಂತಾಗಬೇಕು. ***ಈ ಬೆಳೆಗಳ ಇಳುವರಿ ಅಂತರವನ್ನು ವಲಯ ಮಟ್ಟದಲ್ಲಿ ಕಂಡು ಹಿಡಿದು ಅದನ್ನು ಕಡಿಮೆ ಮಾಡುವ 'ಸುಧಾರಿತ ಬೇಸಾಯ ಪದ್ಧತಿ' (Package of Practices) ಗಳನ್ನು ರೂಪಿಸಬೇಕು.*** ಮೇಲಿನ ಇಳುವರಿ ಮಟ್ಟ ಸಾಧಿಸಿದಲ್ಲಿ ರಾಗಿ ಮತ್ತು ಹಿಂಗಾರು ಜೋಳಗಳ ಉತ್ಪಾದನಾ ವೆಚ್ಚ ಗಮನಾರ್ಹವಾಗಿ ಇಳಿಯಬಹುದಾಗಿದೆ.

**ಶಿಫಾರಸ್ಸು 2:** **ಪ್ರಾತ್ಯಕ್ಷಿಕೆಯಲ್ಲಿ ಬೆಳೆದು ತೋರಿಸುವುದು:** ರಾಜ್ಯ ಸರ್ಕಾರ ಈ ಸಾಲಿನಲ್ಲಿ (2014-15) ರಾಗಿ ಮತ್ತು ಜೋಳದ ಧಾನ್ಯಗಳ ಉತ್ಪಾದನೆ ಹೆಚ್ಚಿಸಲು ಜಾರಿಗೊಳಿಸಿರುವ ಹೊಸ ಕಾರ್ಯಕ್ರಮದಡಿ ಬರುವ ***ರೈತರ ಪ್ರಾತ್ಯಕ್ಷಿಕೆ ಹೊಲಗಳಲ್ಲಿ ಮೇಲಿನ ಪ್ರಮಾಣದ ಇಳುವರಿಯನ್ನು ಬೆಳೆದು ತೋರಿಸಬೇಕು.*** ಈ ಎರಡು ಬೆಳೆಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮದ ವ್ಯಾಪ್ತಿಯನ್ನು ತಲಾ 25,000 ಹೆಕ್ಟೇರ್‌ಗೆ ಹೆಚ್ಚಿಸಿ ಮುಂದಿನ ಸಾಲಿನಲ್ಲೂ ಮುಂದುವರೆಸಬೇಕು.

***ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಗಿರಿಜನರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತರನ್ನು ಈ ಪ್ರಾತ್ಯಕ್ಷಿಯಲ್ಲಿ ಅಧಿಕವಾಗಿ ಒಳಗೊಳಿಸಬೇಕು. (ಅನುಬಂಧ 10)***

**ಶಿಫಾರಸ್ಸು 3:** **ಬೆಳೆ ಪ್ರದೇಶ ಅಧಿಕವಾಗಬೇಕು:** ರಾಜ್ಯದಲ್ಲಿ ರಾಗಿ ಮತ್ತು ಜೋಳ ಬೆಳೆಯುವ ಪ್ರದೇಶ ಕಡಿಮೆಯಾಗದಂತೆ ನೋಡಿಕೊಂಡು ***ಕನಿಷ್ಠ 10 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ರಾಗಿ ಮತ್ತು 15 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಜೋಳ ಬೆಳೆಯುವಂತಾಗಬೇಕು.*** ಕಬ್ಬಿನ ಕೂಳೆ ತೆಗೆದು ರಾಗಿ ಬೆಳೆ, ಹನಿ ನೀರಾವರಿ, ಅಚ್ಚುಕಟ್ಟಿನ ಕೊನೆಯ ಭಾಗ (tail end) ದಲ್ಲಿ ಬೇಸಾಯ ಈ ಎಲ್ಲಾ ಕ್ರಮಗಳಲ್ಲಿ ರಾಗಿ ಮತ್ತು ಜೋಳ ಬೆಳೆಯುವ ರೈತರಿಗೆ ಗರಿಷ್ಠ ಪ್ರಮಾಣದಲ್ಲಿ ರಿಯಾಯ್ತಿ, ಪ್ರೋತ್ಸಾಹ ಮತ್ತಿತರ ಸೌಲಭ್ಯಗಳನ್ನು ನೀಡಬೇಕು. ***ಈ ಮೂಲಕ ಕನಿಷ್ಠ ಶೇ 25 ಭಾಗದ ರಾಗಿ ಮತ್ತು ಹಿಂಗಾರು ಜೋಳದ ಭೂಮಿಗೆ ನೀರಾವರಿ ದೊರಕಬೇಕು.***

**ಶಿಫಾರಸ್ಸು 4:** **ಹೊಲಕ್ಕೊಂದು ಕೆರೆ:** ರಾಗಿ ಮತ್ತು ಜೋಳ ಬೆಳೆಯುವ ಪ್ರದೇಶಗಳಲ್ಲಿ ಈ ಯೋಜನೆ ಮೂಲಕ ಮಳೆ ಕೊಯಿಲು ಮಾಡಿ ಬೆಳೆಗಳಿಗೆ ತೇವಾಂಶ ಕೊರತೆ ನೀಗಿಸಲು ರಕ್ಷಣಾ ನೀರಾವರಿ ಒದಗಿಸುವುದು ಅತ್ಯುತ್ತಮ ಕ್ರಮವಾಗಿದೆ. ಈ ಮೂಲಕ **ಸಮಗ್ರ ಕೃಷಿ ಪದ್ಧತಿ (IFS)** ಯನ್ನೂ ಅಳವಡಿಸಬಹುದಾಗಿದೆ. ಇದಕ್ಕಾಗಿ ಘನ ಸರಕಾರ ಇತ್ತೀಚಿಗೆ ಜಾರಿಗೆ ತಂದಿರುವ **'ಕೃಷಿ ಭಾಗ್ಯ ಯೋಜನೆ'**ಯ ***ಪಾಲಿ ಹೌಸ್ ರಹಿತ ಪ್ಯಾಕೇಜ್‌ಅನ್ನು ಕನಿಷ್ಟ 4***

***ರಿಂದ 5 ಲಕ್ಷಗಳಿಗೆ ಹೆಚ್ಚಿಸಿ ಆ ಮೂಲಕ 5 ಎಕರೆಯ ಹಿಡುವಳಿಗೆ ಅವಶ್ಯಕವಾಗಿರುವ ಕನಿಷ್ಟ 20 ಅಡಿ ಆಳವಾದ ಒಂದು ಕೆರೆ ನಿರ್ಮಿಸಬಹುದಾಗಿದೆ.***

**ಶಿಫಾರಸ್ಸು 5:** **ಕಟಾವು ಮತ್ತಿತರ ಯಂತ್ರಗಳ ಸೇವೆ:** ರಾಗಿ ಮತ್ತು ಬಿಳಿ ಜೋಳ ಬೆಳೆಗಳ ಕಟಾವು ಮಾಡಿ ರಾಶಿ ಮಾಡುವುದೇ ಸವಾಲಿನ ಕೆಲಸ, ಇದಕ್ಕಾಗಿ ಯಂತ್ರಗಳ ಅಭಿವೃದ್ಧಿಯಾಗಿಲ್ಲ. ಪ್ರಸ್ತುತ ಭತ್ತದ ಕಟಾವು (ರೀಪರ್) ಯಂತ್ರವನ್ನು ಸ್ವಲ್ಪ ಮಾರ್ಪಾಡಿಸಿ ರಾಗಿಗೂ ಬಳಸಬಹುದು. ಹಾಗೇ ಜೋಳದ ಕೃಷಿಗೆ ಅಗತ್ಯ ಯಂತ್ರ–ತಂತ್ರಗಳ ಅಭಿವೃದ್ಧಿಯಾಗಬೇಕಾಗಿದೆ. ***ಖಾಸಗಿ ಸಹಭಾಗಿತ್ವದಲ್ಲಿ ರಾಗಿ ಮತ್ತು ಜೋಳ ಕೃಷಿಗೆ ಅಗತ್ಯವಾದ ಯಂತ್ರಗಳು ಅಧಿಕ ಸಂಖ್ಯೆಯಲ್ಲಿ ನಿರ್ಮಾಣವಾಗಬೇಕು.*** ಇದಕ್ಕಾಗಿ ಸರ್ಕಾರದ ಪ್ರೋತ್ಸಾಹ, ಸುಂಕ ರಿಯಾಯ್ತಿ, ಕಡಿಮೆ ಬಡ್ಡಿದರದಲ್ಲಿ ಸಾಲ ದೊರೆಯಬೇಕು. ಕಸ್ಟಮ್ ಹೈರಿಂಗ್ ಯೋಜನೆ ಅಡಿಯಲ್ಲಿ ಈ ಯಂತ್ರಗಳ ಸೇವೆ ರೈತರಿಗೆ ಸುಲಭವಾಗಿ ಲಭ್ಯವಾಗಬೇಕು. ಈ ನಿಟ್ಟಿನಲ್ಲಿ ಬೆಂಗಳೂರು ಮತ್ತು ರಾಯಚೂರು ಕೃಷಿ ಇಂಜಿನಿಯರಿಂಗ್ ಮಹಾ ವಿದ್ಯಾಲಯಗಳ ಮುಖ್ಯಸ್ಥರು ಒಗ್ಗೂಡಿ ಕಾರ್ಯ ಪ್ರವೃತ್ತರಾಗಬೇಕು. ***ಪ್ರಾತ್ಯಕ್ಷಿಕೆ ಹೊಲದ ಎಲ್ಲಾ ರಾಗಿ ಬೆಳೆಗಾರರಿಗೆ ಕಟಾವು ಯಂತ್ರದ ಸೇವೆ ಈ ಸಾಲಿನಿಂದಲೇ ಉಚಿತವಾಗಿ ಸಿಗಬೇಕು.***

> ***ತೃಣಧಾನ್ಯಗಳ ಕಟಾವು ಮತ್ತು ಆನಂತರದ ಚಟುವಟಿಕೆಗಳ ಶ್ರಮ ಮತ್ತು ವೆಚ್ಚ ಕಡಿಮೆ ಮಾಡುವ ತಾಂತ್ರಿಕತೆ ಮತ್ತು ಯಂತ್ರೋಪಕರಣಗಳತ್ತ ರಾಜ್ಯದ ಕೃಷಿ ವಿಶ್ವ ವಿದ್ಯಾನಿಲಯಗಳು ತೀವ್ರ ಗಮನ ಹರಿಸಬೇಕು.***

**ಶಿಫಾರಸ್ಸು 6:** **ಸಂಶೋಧನೆಗಳ ನಡುವೆ ಸಮನ್ವಯ ಏರ್ಪಾಟಾಗಬೇಕು:** ರಾಗಿ ಮತ್ತು ಜೋಳಗಳ ಇಳುವರಿ ಮತ್ತು ಉತ್ಪಾದನೆ ಹೆಚ್ಚಿಸಲು ವಿವಿಧ ಕೃಷಿ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳು; **ಅಖಿಲ ಭಾರತ ತೃಣ ಧಾನ್ಯ ಸಂಶೋಧನಾ ಸಂಯೋಜನೆ** (*All India Co-ordinated Millet Project),* **ತೃಣಧಾನ್ಯಗಳ ಶ್ರೇಷ್ಠತೆ ಕೇಂದ್ರ** (*Centre of Excellence in Millets*), ಬೆಂಗಳೂರು, **ಅಖಿಲ ಭಾರತ ಜೋಳ ಸಂಯೋಜನ ಸಂಶೋಧನಾ ಯೋಜನೆ** (*All India Co-ordinated Sorghum Research Project)* ರಾಯಚೂರು, ಇತ್ಯಾದಿಗಳ ನಡುವೆ ಹೊಂದಾಣಿಕೆ ಮತ್ತು ಸಮನ್ವಯ ಅಗತ್ಯ.

ಈ ನಿಟ್ಟಿನಲ್ಲಿ ಸಂಶೋಧನಾ ನಿರ್ದೇಶಕರುಗಳು, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು, ಧಾರವಾಡ ಮತ್ತು ರಾಯಚೂರು ಮತ್ತು ಯೋಜನಾ ಸಂಯೋಜಕರು ಅ.ಭಾ.ತೃ.ಸ.ಸಂ.ಗಳು ನಿಯತವಾಗಿ ಸಭೆ ಸೇರಿ, ಚರ್ಚಿಸಿ ಗುರಿ ಸಾಧಿಸುವ ಕಾರ್ಯ ಯೋಜನೆ ರೂಪಿಸಿ ಮುಂದುವರೆಯುವುದು. ***ಈ ಸಮನ್ವಯ ಕಾರ್ಯದ ಜವಾಬ್ದಾರಿಯನ್ನು ಯೋಜನಾ ಸಂಯೋಜಕರು,*** **ಅಖಿಲಭಾರತ ತೃಣಧಾನ್ಯ ಸಂಶೋಧನಾ ಸಂಯೋಜನೆ,** ***ಬೆಂಗಳೂರು ಇವರು ನಿಭಾಯಿಸುವುದು.***

## B. ಬೆಲೆಯೇತರ (Non-Price) ಪ್ರೋತ್ಸಾಹಗಳು:

**ಶಿಫಾರಸ್ಸು 7:** **ಸಂಪೂರ್ಣ ಬೀಜ ರಿಯಾಯ್ತಿ:** ರಾಗಿ ಮತ್ತು ಹಿಂಗಾರಿನ ಬಿಳಿ ಜೋಳ ಬೆಳೆಯುವ ರೈತರಿಗೆ ಅಗತ್ಯ ಬೀಜವನ್ನು ಬೀಜೋಪಚಾರ ಔಷಧಿ ಜೊತೆಗೆ ಸಂಪೂರ್ಣ ರಿಯಾಯ್ತಿ ದರದಲ್ಲಿ ನೀಡುವುದು. ***ಈ ಬೆಳೆಗಳ ಕ್ಷೇತ್ರವನ್ನು ಆಕ್ರಮಿಸಿ ಪೈಪೋಟಿ ನೀಡುತ್ತಿರುವ ಮುಸುಕಿನ ಜೋಳ, ಹತ್ತಿಗಳಂತಹ ವಾಣಿಜ್ಯ ಬೆಳೆಗಳಿಗೆ ಬೀಜ ರಿಯಾಯ್ತಿ ಸಂಪೂರ್ಣ ನಿಲ್ಲಿಸುವುದು.***

**ಶಿಫಾರಸ್ಸು 8:** **ಸಂಪೂರ್ಣ ರಿಯಾಯ್ತಿಯಲ್ಲಿ ಬೆಳೆ ವಿಮೆ:** 'ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆ'ಯನ್ನು ಮತ್ತಿತರ ವಿಮಾ ಯೋಜನೆಗಳನ್ನು ಸರಳೀಕರಿಸಿ ರೈತರಿಗೆ ಶೀಘ್ರ ಪ್ರತಿಫಲ ದೊರಕುವಂತೆ ರಾಗಿ ಮತ್ತು ಜೋಳ ಬೆಳೆಗಳಿಗೆ ರಾಜ್ಯದಾದ್ಯಂತ ಅಳವಡಿಸಿ, ***ವಿಮಾ ಕಂತಿನ ದರವನ್ನು ಸಂಪೂರ್ಣ ಸರ್ಕಾರ ಭರಿಸುವುದು.*** 2014ರ ಹಿಂಗಾರು ಹಂಗಾಮಿನಲ್ಲೇ ಈ ಸವಲತ್ತು ಜಾರಿಗೆ ಬರುವಂತೆ ಅಧಿಸೂಚನೆ ಹೊರಡಿಸಬೇಕು.

**ಶಿಫಾರಸ್ಸು 9:** **ಇತರ ಯೋಜನೆಗಳ ಫಲಾನುಭವ:** ರಾಗಿ, ಜೋಳ ಮುಂತಾದ ತೃಣಧಾನ್ಯಗಳು ಗಿರಿಜನರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಗಳ ಸಾಮಾನ್ಯ ಆಹಾರ. ಈ ವರ್ಗದ ರೈತರುಗಳಿಗೆ ಶೇ 90%ರಷ್ಟು ರಿಯಾಯ್ತಿಯಲ್ಲಿ ನೀಡುತ್ತಿರುವ ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ, ಮಣ್ಣಿನ ಸತ್ವ ಹೆಚ್ಚಿಸುವ ಯೋಜನೆ ಇತ್ಯಾದಿ ***ವಿಶೇಷ ಘಟಕ ಯೋಜನೆ ಫಲಾನುಭವ ರಾಗಿ ಮತ್ತು ಜೋಳ ಬೆಳೆಯುವ ರಾಜ್ಯದ ಎಲ್ಲಾ ರೈತರಿಗೂ ವಿಸ್ತರಿಸಬೇಕು. ಹಾಗೇ ಸಾವಯವ ಭಾಗ್ಯ, ಭೂಚೇತನ ಇತ್ಯಾದಿ ಯೋಜನೆಗಳ ಫಲಾನುಭವ ಕೂಡ.***

**ಶಿಫಾರಸ್ಸು 10:** **ಉದ್ಯೋಗ ಖಾತ್ರಿ ಯೋಜನೆ ಮತ್ತು ಕೃಷಿ ಅಭಿವೃದ್ಧಿ ಒಗ್ಗೂಡಿಕೆ:** ರಾಗಿ ಮತ್ತು ಜೋಳ ಬೆಳೆಯುವ ರೈತರಿಗೆ ಮಣ್ಣು ಮತ್ತು ನೀರು ಸಂರಕ್ಷಣೆ ಮಾಡಿ ಭೂ ಅಭಿವೃದ್ಧಿ ಮಾಡಲು MGNREGA ಉದ್ಯೋಗ ಖಾತ್ರಿ ಯೋಜನೆಯ ಫಲಾನುಭವದ ಲಾಭ ದೊರಕುವಂತೆ ಮಾಡುವ ಎಲ್ಲಾ ಸಾಧ್ಯತೆಗಳಿವೆ. ***ಈ ಒಗ್ಗೂಡಿಕೆ ಕಾರ್ಯ ಸೂಕ್ತ ರೂಪ ಪಡೆಯಲು ಕೃಷಿ ಇಲಾಖೆ ಶೀಘ್ರವಾಗಿ ಪ್ರಸ್ತಾವನೆಯನ್ನು ಗ್ರಾಮೀಣ ಅಭಿವೃದ್ಧಿ ಇಲಾಖೆಗೆ ಸಲ್ಲಿಸಿ ಕೇಂದ್ರ ಸರ್ಕಾರದೊಡನೆ ಸಮರ್ಥವಾಗಿ ವ್ಯವಹಾರ ನಡೆಸತಕ್ಕದ್ದು.***

***ಭೂಮಿಯ ಫಲವತ್ತತೆ, ಭೂಸಾರ ಹೆಚ್ಚಳ ಮಾಡಿ ಭೂಮಿಯನ್ನು ಒಂದು ಉತ್ಪಾದಕ ಆಸ್ತಿ*** *(Productive Asset)* ***ರೂಪದಲ್ಲಿ ಅಭಿವೃದ್ಧಿ ಮಾಡಲು ರಾಗಿ ಮತ್ತು ಜೋಳ ಬೆಳೆಯುವ ಎಲ್ಲಾ ಹೊಲಕ್ಕೆ ಎಕರೆ ಒಂದಕ್ಕೆ 10 ರಿಂದ 15 ದಿನಗೂಲಿ ನೌಕರರೂ ಇದಕ್ಕೆ ಹೊಂದಿಕೊಂಡ ಪ್ರಮಾಣದ ಹಸಿರೆಲೆ ಗೊಬ್ಬರ, ಬೀಜ, ಜೈವಿಕ / ಸಾವಯವ ಗೊಬ್ಬರ, ಲಘು ಪೋಶಕಾಂಶ ಇತ್ಯಾದಿ ಪರಿಕರಗಳನ್ನು,*** *MGNREGA* ***ಯೋಜನೆ ಮೂಲಕ ವಿತರಿಸಬೇಕು.***

## C. ಸ್ಥಳೀಯವಾಗಿ ಖರೀದಿ, ಶೇಖರಣೆ ಮತ್ತು ಶೀಘ್ರ ಪಾವತಿ:

**ಶಿಫಾರಸ್ಸು 11:** **ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳ (PACCS) ಸೂಕ್ತ ಬಳಕೆ:** ಗ್ರಾಮಾಂತರ ಪ್ರದೇಶಗಳಲ್ಲಿ ಈಗಾಗಲೇ ಬೇರು ಬಿಟ್ಟು ಹಣಕಾಸಿನ ವ್ಯವಹಾರ ನಡೆಸುತ್ತಿರವ ಈ PACCS ಸಂಸ್ಥೆಗಳನ್ನು ರಾಗಿ ಮತ್ತು ಜೋಳ ಖರೀದಿ ಮತ್ತು ಹಣ ಪಾವತಿಗೆ ಬಳಸಬೇಕು. ಖರೀದಿಗೆ ಅಗತ್ಯ ಹಣ ವಿಳಂಬವಾಗದ ರೀತಿಯಲ್ಲಿ ಬಿಡುಗಡೆಯಾಗಬೇಕು. ಖರೀದಿ ಹಣದ ಮೊತ್ತಕ್ಕೆ ಅನುಗುಣವಾಗಿ ಸೂಕ್ತ ಭಾಗವನ್ನು ನಿರ್ವಹಣಾ ವೆಚ್ಚದ ರೂಪದಲ್ಲಿ ಈ ಸಂಸ್ಥೆಗಳಿಗೆ ನೀಡಿ ಅವುಗಳನ್ನು ಸುಭದ್ರಗೊಳಿಸಬಹುದು. ಈ ವಿಚಾರದಲ್ಲಿ ಛತ್ತೀಸ್‌ಘಡ್ ರಾಜ್ಯದ ಅನುಭವ ಪಡೆಯುವುದು.

***ಈ ನಿಟ್ಟಿನಲ್ಲಿ ರೈತರು ಮತ್ತು ಸರ್ಕಾರಗಳ ನಡುವೆ ಪೂರ್ವಬಾವಿ ಖರೀದಿ ಒಪ್ಪಂದ (Buy back) ಯೋಜನೆ ಜಾರಿಯಾಗುವುದು ಅತ್ಯಂತ ಸೂಕ್ತವಾಗಿರುತ್ತದೆ. ಮಾದರಿ ಕರಾರು ಒಪ್ಪಂದ ಪ್ರತಿಯನ್ನು, ಅನುಬಂಧ 11ರಲ್ಲಿ ನೀಡಲಾಗಿದೆ.***

**ಶಿಫಾರಸ್ಸು 12:** **ಖರೀದಿ ವ್ಯವಸ್ಥೆ ಮತ್ತು ಗುಣ ಮಟ್ಟದ ಬಗ್ಗೆ ತೀವ್ರ ನಿಗಾ:** ಬೆಂಗಳೂರು, ಧಾರವಾಡ ಮತ್ತು ರಾಯಚೂರು ಕೃಷಿ ವಿಶ್ವ ವಿದ್ಯಾನಿಲಯಗಳ **ಕೃಷಿ ಮಾರಾಟ, ಆಹಾರ ಮತ್ತು ಗೃಹ ವಿಜ್ಞಾನ ಮತ್ತು ಬೀಜ ತಂತ್ರಜ್ಞಾನ ವಿಭಾಗಗಳ ವಿಜ್ಞಾನಿ / ಪ್ರಾಧ್ಯಾಪಕರುಗಳಿಗೆ** ಆಯಾ ಭಾಗದಲ್ಲಿ ವ್ಯವಸ್ಥಿತ ರೀತಿಯಲ್ಲಿ ಗುಣಮಟ್ಟದ ರಾಗಿ ಮತ್ತು ಜೋಳಗಳ ಖರೀದಿಯಾಗುವಂತೆ ಮಾಡುವ ಜವಾಬ್ದಾರಿ ನೀಡುವುದು. ***ಪಾಲ್ಗೊಳ್ಳುವ ವಿಜ್ಞಾನಿ / ಪ್ರಾಧ್ಯಾಪಕರುಗಳಿಗೆ ಭೂಚೇತನ ಯೋಜನೆ ಮಾದರಿಯಲ್ಲಿ ವಾಸ್ತವಿಕ ಪ್ರಯಾಣ ವೆಚ್ಚ ಮತ್ತು ಸೂಕ್ತ ಗೌರವ ಧನ ನೀಡುವುದು.***

> **ಸರ್ಕಾರದ ಖರೀದಿ ಕಾರ್ಯಕ್ಕೆ ಪೂರೈಕೆ ಮಾಡುವ ಧಾನ್ಯಗಳ 'ಯೋಗ್ಯ ಮತ್ತು ಸರಾಸರಿ ಗುಣಮಟ್ಟ' (Fair & Average Quality – FAQ)ದ ಬಗ್ಗೆ ರೈತರಲ್ಲಿ ಸ್ಪಷ್ಟ ಅರಿವು ಮತ್ತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಅಗತ್ಯ ತರಬೇತಿ ಕಾರ್ಯಕ್ರಮ ಏರ್ಪಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಹಿಂದಿನ ಬೆಲೆ ಆಯೋಗದ ಪ್ರಸ್ತಾಪವನ್ನು ಪರಿಶೀಲಿಸಬೇಕು.**

**ಶಿಫಾರಸ್ಸು 13:** **ಗ್ರಾಮೀಣ ಶೇಖರಣಾ ವ್ಯವಸ್ಥೆ:** ಖರೀದಿಸಿದ ರಾಗಿ ಮತ್ತು ಜೋಳವನ್ನು ಗ್ರಾಮ / ಹೋಬಳಿ ಮಟ್ಟದಲ್ಲಿ ಹಾಳಾಗದಂತೆ ವೈಜ್ಞಾನಿಕ ರೀತಿಯಲ್ಲಿ ವಿತರಣೆಗೆ ಅನುಗುಣವಾಗಿ ಶೇಖರಿಸಿಡಬೇಕು. ಇದಕ್ಕಾಗಿ ಖರೀದಿ ಮತ್ತು ವಿತರಣೆ ಪ್ರಮಾಣ ಮತ್ತು ಸಮಯಗಳನ್ನು ಗಮನದಲ್ಲಿಟ್ಟುಕೊಂಡು ಆಯಾ ಪ್ರದೇಶಗಳಲ್ಲಿ ಪ್ರತಿ ತಾಲೋಕಿಗೆ 20,000 ಟನ್ ಶೇಖರಿಸುವ ಗ್ರಾಮೀಣ ಉಗ್ರಾಣಗಳ ಶೀಘ್ರ ನಿರ್ಮಾಣವಾಗಬೇಕು. ***ಇದರ ವ್ಯವಸ್ಥಿತ ನಿರ್ವಹಣೆಗೆ ರೈತಗುಂಪುಗಳು, ಸ್ಥಳೀಯ ಸ್ವಯಂಸೇವಾ ಸಂಘಗಳು ಇನ್ನಿತರ ಸಮುದಾಯ ಪ್ರತಿನಿಧಿಸುವ ಸಂಸ್ಥೆಗಳನ್ನು ಸೂಕ್ತ ಪ್ರತಿಫಲ ನೀಡಿ ಬಳಸಿಕೊಳ್ಳಬೇಕು.***

**ಶಿಫಾರಸ್ಸು 14:** **ಮಾರುಕಟ್ಟೆ ಸ್ಥಿರೀಕರಣಕ್ಕೆ ಪೂರಕವಾದ ರೀತಿಯಲ್ಲಿ ಖರೀದಿ ಮಾಡುವುದು:** ಕೊಯ್ಲಿನ ನಂತರದ ದಿನಗಳಲ್ಲಿ ಆವಕ ಅಧಿಕವಾಗಿರುವುದರಿಂದ ಆ ಸಂದರ್ಭದಲ್ಲಿ ರಾಗಿ ಮತ್ತು ಜೋಳಗಳ ಖರೀದಿ ಕೈಗೊಂಡಲ್ಲಿ ಮಾರುಕಟ್ಟೆ ಬೆಲೆಗಳು ಸ್ಥಿರವಾಗಿ ರೈತರಿಗೆ ಅನುಕೂಲ ಮಾಡಿದಂತಾಗುತ್ತದೆ. ಈ ನಿಟ್ಟಿನಲ್ಲಿ ರಾಗಿಯನ್ನು ಜನವರಿಯಿಂದ ಏಪ್ರಿಲ್ *(ಸಂಕ್ರಾಂತಿಯಿಂದ ಯುಗಾದಿ ಹಬ್ಬದೊಳಗೆ)* ಹಾಗೇ ಜೋಳವನ್ನು ಮಾರ್ಚ್‌ನಿಂದ ಜುಲೈವರೆಗೆ ಖರೀದಿ ಮಾಡುವುದು ಸೂಕ್ತವಾಗಿರುತ್ತದೆ.

## D. ಪೂರಕ ಕ್ರಮಗಳು:

**ಶಿಫಾರಸ್ಸು 15:** **ಜವಾಬ್ದಾರಿಯ ಸೂಕ್ತ ಹಂಚಿಕೆ:** ಅನ್ನಭಾಗ್ಯದ ಯಶಸ್ಸಿಗೆ ರಾಗಿ ಮತ್ತು ಜೋಳಗಳ ಉತ್ಪಾದನೆ, ಖರೀದಿ, ಶೇಖರಣೆ ಮತ್ತು ವಿತರಣೆ ಕಾರ್ಯಗಳು ಸೂಕ್ತ ರೀತಿಯಲ್ಲಿ ವಿವಿಧ ಇಲಾಖೆಗಳಿಂದ ನಿರ್ವಹಣೆಯಾಗಬೇಕು. ಉತ್ಪಾದನೆ ಕೃಷಿ ಇಲಾಖೆಯಿಂದ, ಖರೀದಿ ಸಹಕಾರ ಇಲಾಖೆಯಿಂದ, ಶೇಖರಣೆ ಮಾರಾಟ ಇಲಾಖೆಯಿಂದ ಮತ್ತು ವಿತರಣೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಕೈಗೊಳ್ಳುವುದು ಅತ್ಯಂತ ಸೂಕ್ತವಾಗಿರುತ್ತದೆ.

***ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಈ ನಾಲ್ಕು ಇಲಾಖಾ ಮುಖ್ಯಸ್ಥರು ಶೀಘ್ರ ಸಭೆ ಸೇರಿ ಈ ವಿಚಾರವನ್ನು ನಿರ್ಣಯಿಸುವುದು. ಇದರ ಸಂಯೋಜನೆಯ ಜವಾಬ್ದಾರಿಯನ್ನು ಆಯುಕ್ತರು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ವಹಿಸತಕ್ಕದ್ದು.***

**ಶಿಫಾರಸ್ಸು 16:** **ಸಮುದಾಯ ಸಂಘಟನೆಗಳ ಸಕ್ರಿಯ ಭಾಗವಹಿಸುವಿಕೆ:** ತಳಮಟ್ಟದ ಸಮುದಾಯಗಳನ್ನು ಪ್ರತಿನಿಧಿಸುವ ಹಲವಾರು ಸ್ವಯಂಸೇವಾ ಸಂಸ್ಥೆಗಳು ತೃಣ ಧಾನ್ಯ ಆಧಾರಿತ ಆಹಾರ ಮತ್ತು ಕೃಷಿ ವ್ಯವಸ್ಥೆಯನ್ನು ಉಳಿಸಿ, ಬೆಳೆಸುವಲ್ಲಿ ಅಪಾರ ಶ್ರಮ ವಹಿಸಿರುವುವು. ಇಂತಹ ಸ್ವಯಂಸೇವಾ ಸಂಸ್ಥೆಗಳನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಸ್ಥಳೀಯವಾಗಿ ಜೋಳ ಮತ್ತು ರಾಗಿ ಉತ್ಪಾದನೆ ಹೆಚ್ಚಿಸುವ ಮತ್ತು ಆ ಮೂಲಕ ಖರೀದಿಸಿ ವಿತರಿಸುವಂತಹ ***'ವಿಕೇಂದ್ರಿಕೃತ ಸಿರಿಧಾನ್ಯ'*** *(ಸ್ವಯಂಸೇವಾ ಸಂಸ್ಥೆಗಳು ತೃಣಧಾನ್ಯಗಳಿಗೆ ನೀಡಿರುವ ಹೆಸರು)* ***ಆಧಾರಿತ ಪಡಿತರ ಪದ್ಧತಿಗಳನ್ನು ನಡೆಸುವ ಜವಾಬ್ದಾರಿಯನ್ನು ಪ್ರಾಯೋಗಿಕವಾಗಿ ಆಯ್ದ ಸ್ವಯಂ ಸೇವಾ ಸಂಸ್ಥೆಗಳಿಗೆ ವಹಿಸುವುದು.***

**ಶಿಫಾರಸ್ಸು 17:** ಈ ತೃಣ ಧಾನ್ಯಗಳ ವಿಚಾರದಲ್ಲಿ ನಾಟಿ ತಳಿಗಳ ಮೇಲೆ ಗ್ರಾಹಕರ ವಿಶೇಷ ಆಸಕ್ತಿ ಮತ್ತು ಮೆಚ್ಚಿಗೆ ಅದಿಕವಾಗಿದೆ. ನಾಟಿ ತಳಿ ಮಾಲ್ದಂಡಿ ಬಿಳಿ ಜೋಳವನ್ನು ಮಾತ್ರ ಗ್ರಾಹಕರು ಇಂದೂ ಬಯಸುತ್ತಿರುವರು. ಈ ತೃಣ ಧಾನ್ಯಗಳ ***ತಳಿ ವೈವಿಧ್ಯವನ್ನು ಸಂರಕ್ಷಿಸುವುದರ ಜೊತೆಗೆ ರೈತರ ಸಹಭಾಗಿತ್ವದಲ್ಲಿ ಇವುಗಳ ಉತ್ತಮ ಗುಣಗಳು, ಪೌಷ್ಟಿಕಾಂಶಗಳು ಕೆಡದ ರೀತಿಯಲ್ಲಿ ತಳಿ ಅಭಿವೃದ್ದಿ ಕಾರ್ಯ ಕೂಡ ಕೈಗೊಳ್ಳಬೇಕಾಗಿದೆ.***

**ಶಿಫಾರಸ್ಸು 18:** **ವಸ್ತುನಿಷ್ಠ ವಿಶ್ಲೇಷಣೆ:** ಅನ್ನಭಾಗ್ಯ ಯೋಜನೆಗೆ ಅಗತ್ಯವಿರುವ ರಾಗಿ ಮತ್ತು ಜೋಳವನ್ನು ಅಧಿಕ ಬೆಂಬಲ ಬೆಲೆ ನೀಡಿ ಖರೀದಿಸಿ ಅತೀ ರಿಯಾಯ್ತಿ ದರದಲ್ಲಿ ವಿತರಿಸುವುದರ ಪರಿಣಾಮ ಇತರೇ ಬೆಳೆಗಳ ಆರ್ಥಿಕದಾಯಕತೆ, ಮಾರುಕಟ್ಟೆ ಬೆಲೆಗಳ ಮೇಲಿನ ಪರಿಣಾಮ, ದೀರ್ಘಾವಧಿಯಲ್ಲಿ ರಾಜ್ಯದ ಕೃಷಿ ಅರ್ಥವ್ಯವಸ್ಥೆಯ ಮೇಲಾಗುವ ಪರಿಣಾಮಗಳ ಸಮಗ್ರ, ವಸ್ತುನಿಷ್ಠ ವಿಶ್ಲೇಷಣೆ, ಅಧ್ಯಯನಗಳು ಅತ್ಯಗತ್ಯವಾಗಿವೆ. ***ಈ ಮೂಲಕ ಈ ಕಾರ್ಯಕ್ರಮವನ್ನು ಮತ್ತಷ್ಟು ಪರಿಣಾಮಕಾರಿ ಮಾಡುವ ಮಾರ್ಗಗಳನ್ನು ಹುಡುಕಬಹುದಾಗಿದೆ.***

ರಾಜ್ಯದ ಕೃಷಿ ವ್ಯವಸ್ಥೆ, ಗ್ರಾಮೀಣ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ಅಧ್ಯಯನ, ಸಂಶೋಧನೆಗಳಲ್ಲಿ ತೊಡಗಿರುವ ಬೆಂಗಳೂರಿನ **'ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆ'** (ISEC), ವಿವಿಧ ಕೃಷಿ ವಿಶ್ವ ವಿದ್ಯಾನಿಲಯಗಳ **'ಕೃಷಿ ಅರ್ಥಶಾಸ್ತ್ರ ಮತ್ತು ಮಾರಾಟ ಶಾಸ್ತ್ರ ವಿಭಾಗಗಳು', ಬೆಂಗಳೂರಿನ ಭಾರತೀಯ ನಿರ್ವಹಣಾ ಸಂಸ್ಥೆ** (IIM) ಮತ್ತಿತರ ಸಂಸ್ಥೆಗಳು ಒಗ್ಗೂಡಿ ಈ ಕಾರ್ಯ ಕೈಗೆತ್ತಿಕೊಳ್ಳಬೇಕು,

**ಶಿಫಾರಸ್ಸು 19:** ಇದಕ್ಕೆ ಪೂರ್ವಭಾವಿಯಾಗಿ ರಾಗಿ ಮತ್ತು ಹಿಂಗಾರಿನ ಬಿಳಿ ಜೋಳದ ಕೃಷಿಯಿಂದ ನೀರು, ರಸಗೊಬ್ಬರ, ಕ್ರಿಮಿಕೀಟ ನಾಶಕಗಳ ಉಳಿತಾಯ, ಆ ಮೂಲಕ ಸರ್ಕಾರಕ್ಕೆ ರಿಯಾಯ್ತಿಯ ಹೊರೆ ಕಡಿತ, ಪರಿಸರದ ಮೇಲೆ ಹಿತಕರ ಪರಿಣಾಮ, ಅಧಿಕ ಮತ್ತು ಉತ್ಕೃಷ್ಟ ಮೇವಿನ ಪೂರೈಕೆ, ಈ ಪೌಷ್ಟಿಕ ಧಾನ್ಯಗಳ ಆಹಾರದಿಂದ ಜನರ ಆರೋಗ್ಯದ ಮೇಲಿನ ಒಳ್ಳೆಯ ಪರಿಣಾಮ, ಇವುಗಳ ರುಚಿತನದಿಂದ ಗ್ರಾಹಕರು ಪಡೆಯುವ ***ಅಧಿಕ ತುಷ್ಟಿ ಗುಣ (utility) ಇವೆಲ್ಲವುಗಳ ಮೌಲ್ಯದ ಲೆಕ್ಕಾಚಾರವು ಶೀಘ್ರ ಆಗಬೇಕಾಗಿದೆ.***

***ಈ ವಿಚಾರಗಳ ಮೇಲೆ ಚರ್ಚೆ, ವಿಚಾರಗೋಷ್ಠಿ, ಕಮ್ಮಟ, ಸಂಶೋಧನೆ ಮತ್ತು ಸ್ನಾತಕೋತ್ತರ ಸಂಶೋಧನೆಗಳು ನಡೆಯುವಂತಾಗಲು ನಿರ್ದೇಶಕರು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆ (ISEC), ರಾಜ್ಯದ ವಿವಿಧ ಕೃಷಿ ವಿಶ್ವ ವಿದ್ಯಾನಿಲಯಗಳ ಕೃಷಿ ಅರ್ಥಶಾಸ್ತ್ರ ವಿಭಾಗಗಳ ಮುಖ್ಯಸ್ಥರ ಸಭೆ ಏರ್ಪಡಿಸಿ ಮುಂದುವರೆಯುವುದು.***

**ಶಿಫಾರಸ್ಸು 20:** **ಮೇಲು ಉಸ್ತುವಾರಿಗಾಗಿ ಉನ್ನತ ಮಟ್ಟದ ಸಮಿತಿ:** ಅನ್ನಭಾಗ್ಯ ಯೋಜನೆಗೆ ಪೂರಕವಾದ ರಾಗಿ ಮತ್ತು ಜೋಳದ ಅಧಿಕ ಉತ್ಪಾದನೆ, ಖರೀದಿ, ವಿತರಣೆ ಕಾರ್ಯಗಳ ಯಶಸ್ವಿ

ಅನುಷ್ಠಾನಕ್ಕೆ ವಿವಿಧ ಇಲಾಖೆ ಮತ್ತು ಸಂಶೋಧನಾ ಸಂಸ್ಥೆಗಳ ನಡುವೆ ಹೊಂದಾಣಿಕೆ, ಸಮನ್ವಯ ಅತ್ಯಗತ್ಯ.

***ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು (Development Commissioner) ನೇತೃತ್ವದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆ, ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಜೊತೆಗೆ ಬೆಂಗಳೂರು, ಧಾರವಾಡ ಮತ್ತು ರಾಯಚೂರು, ಕೃಷಿ ವಿಶ್ವವಿದ್ಯಾನಿಲಯಗಳ ಕುಲಪತಿಗಳ ಒಂದು 'ಉನ್ನತ ಮಟ್ಟದ ಸಮಿತಿ' ರಚಿಸಿ ಕಾರ್ಯ ಪ್ರವೃತ್ತರಾಗಬೇಕು.***

**ಶಿಫಾರಸ್ಸು 21:** **ಪ್ರಚಾರ ಮತ್ತು ಪ್ರಭಲ ಜನಾಭಿಪ್ರಾಯ ರೂಪಿಸುವುದು:** ಅನ್ನಭಾಗ್ಯ ಯೋಜನೆಗೆ ಸಿಕ್ಕಿರುವಷ್ಟು ಪ್ರಚಾರ ರಾಗಿ ಮತ್ತು ಜೋಳಗಳನ್ನು ಈ ಯೋಜನೆಯಡಿ ವಿತರಣೆಗೆ ತಂದಿರುವ ಮಹತ್ವದ ಬಗ್ಗೆ ಸಿಕ್ಕಿರುವುದಿಲ್ಲ. ಭೂಚೇತನ ಯೋಜನೆಗೆ ನೀಡುತ್ತಿರುವ ಪ್ರಚಾರ ಮಾದರಿಯಲ್ಲೇ ಡಂಗುರ, ಭಿತ್ತಿ ಪತ್ರಗಳು, ಕರಪತ್ರಗಳು, ಗೋಡೆ ಬರಹ ಇತ್ಯಾದಿ ರೀತಿಯಲ್ಲಿ ***ರಾಗಿ ಮತ್ತು ಜೋಳದ ಕೃಷಿ, ಖರೀದಿ ಮತ್ತು ವಿತರಣೆ ಬಗ್ಗೆ ವ್ಯಾಪಕ ಪ್ರಚಾರ ನೀಡುವುದು.***

ಹಾಗೇ ರಾಗಿ ಮತ್ತು ಜೋಳಗಳ ಉತ್ತಮತೆ ಮತ್ತು ಬಹುವಿದದ ಸೇವೆಗಳ ಬಗ್ಗೆ ಅಧ್ಯಯನ, ಸಂಶೋಧನೆ, ಕಾರ್ಯಾಗಾರ, ಕಮ್ಮಟಗಳ ಜೊತೆಗೆ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಮುದಾಯ ಸಂಘಟನೆಗಳ ಸಹಯೋಗದಿಂದ ಬೀದಿ ನಾಟಕ, ಹಾಡು, ಕುಣಿತ ಕ್ಷೇತ್ರೋತ್ಸವ ಇತ್ಯಾದಿಗಳನ್ನು ಏರ್ಪಡಿಸಿ ಆ ಮೂಲಕ ***ಪ್ರಬಲ ಜನಾಭಿಪ್ರಾಯವನ್ನು ಮೂಡಿಸುವುದು.***

**ಶಿಫಾರಸ್ಸು 22:** **ಮೌಲ್ಯವರ್ದನೆ:** ರಾಗಿಯಿಂದ ಮುದ್ದೆಯ ಜೊತೆಗೆ ರೊಟ್ಟಿ, ಹುರಿ ಹಿಟ್ಟು, ಮಾಲ್ಟ್ ಹಾಗೇ ಬಿಳಿ ಜೋಳದಿಂದ ರೊಟ್ಟಿಯ ಜೊತೆಗೆ ಉಪಮ, ಇಡ್ಲಿ, ನೂಡಲ್, ಬಿಸ್ಕಟ್, ಇತ್ಯಾದಿ ಮೌಲ್ಯವರ್ಧತಿ ಉತ್ಪನ್ನಗಳನ್ನು ತಯಾರಿಸಬಹುದಾಗಿದೆ. ಈ ನಿಟ್ಟಿನಲ್ಲಿ ಸಂಸ್ಕರಣೆ, ಮೌಲ್ಯವರ್ಧನೆ ಕೈಗೊಂಡಲ್ಲಿ ಇವುಗಳ ಕೃಷಿಗೆ ಪ್ರಾಮುಖ್ಯತೆ ದೊರೆಯಲಿದೆ. ಈ ಉದ್ದೇಶಕ್ಕಾಗಿ ***ರೈತರ ಗುಂಪು ಮಾರಾಟ (Group Marketing) ವನ್ನು ಪ್ರೋತ್ಸಾಹಿಸುವುದು ಅತ್ಯಗತ್ಯವಾಗಿದೆ.***

## E. ಈ ಸಾಲಿನ ಆದ್ಯತೆ:

**ಶಿಫಾರಸ್ಸು 23:** ***ಪರಿವರ್ತನಾಶೀಲ ಬೆಂಬಲ ಬೆಲೆ: ಪ್ರಸ್ತುತ ಸಾಲಿನಲ್ಲಿ ಘೋಷಿಸಿರುವ ಬೆಂಬಲ ಬೆಲೆಗಿಂತ ಕೊಯಿಲಿನ ನಂತರದ ಸಮಯದಲ್ಲಿ ಮಾರುಕಟ್ಟೆ ಬೆಲೆ ಅಧಿಕವಾಗಿದ್ದಲ್ಲಿ ಕನಿಷ್ಠ ಒಂದು ಲಕ್ಷ ಟನ್ ಪ್ರಮಾಣದ ರಾಗಿ ಮತ್ತು ಜೋಳಗಳ ಖರೀದಿ ಗುರಿಯನ್ನಿಟ್ಟುಕೊಂಡು ಸದ್ಯದ ಬೆಂಬಲ ಬೆಲೆಯನ್ನು ಪುನರ್ ಪರಿಶೀಲಿಸಿ ಹೆಚ್ಚಿಸುವುದು ಸೂಕ್ತವಾಗಿರುತ್ತದೆ.***

ಆದರೆ ಸರ್ಕಾರದ ಹಸ್ತಕ್ಷೇಪದಿಂದ ಮಾರುಕಟ್ಟೆ ಬೆಲೆ ಏರಿ ಸಾಮಾನ್ಯ ಗ್ರಾಹಕರಿಗೆ ತೊಂದರೆಯಾಗಬಾರದು. ಖಾಸಗಿ ವರ್ತಕರಿಗೆ ಪೈಪೋಟಿ ಖರೀದಿಗೆ ಅವಕಾಶವಿರುವಂತೆ ಯಾವುದೇ ಸಂದರ್ಭದಲ್ಲೂ ಸರ್ಕಾರ **"ಏಕೈಕ ಖರೀದಿದಾರ"** *(Monpsony Buyer)* ಆಗದಂತೆ ತೀವ್ರ ನಿಗಾ ವಹಿಸಬೇಕು.

**ಶಿಫಾರಸ್ಸು 24:** **ಸೂಕ್ತ ವ್ಯವಹಾರ ಮತ್ತು ಅನುಸಂಧಾನ:** ರಾಜ್ಯದಲ್ಲಿ ಬಿಳಿ ಜೋಳ ಮತ್ತು ರಾಗಿ ಬೆಳೆಗಳ ಅಧಿಕ ಉತ್ಪಾದನೆಗೆ ಉದ್ಯೋಗ ಖಾತರಿ ಯೋಜನೆ ಫಲಾನುಭವ, ಅಧಿಕ ಬೆಂಬಲ ಬೆಲೆ, ಇತ್ಯಾದಿ ಪ್ರೋತ್ಸಾಹಗಳ ಅಗತ್ಯವಿರುತ್ತದೆ, ಬೆಂಬಲ ಬೆಲೆ ನಿರ್ಧರಿಸಲು ಬಳಸುವ ಕೇಂದ್ರ ಸರ್ಕಾರದ ಈಗಿನ CACP ಆರ್ಥಿಕ ಮಾನದಂಡಗಳಾದ ಬೇಡಿಕೆ, ಪೂರೈಕೆ, ಉತ್ಪಾದನಾ ವೆಚ್ಚ, ಅಂತರ್ ಬೆಳೆ ಬೆಲೆ ತಾರತಮ್ಯ, ವಾಣಿಜ್ಯ ಕರಾರು ಇತ್ಯಾದಿಗಳು ಈ ತೃಣಧಾನ್ಯಗಳು ನೀಡುವ ಸಂಪೂರ್ಣ ಸೇವೆಯನ್ನು ಪ್ರತಿಫಲಿಸುವುದಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರದೊಡನೆ ಸೂಕ್ತ ರೀತಿಯಲ್ಲಿ ವ್ಯವಹರಿಸಿ, ಮನವರಿಕೆ ಮಾಡುವುದು ಅಗತ್ಯವಾಗಿರುತ್ತದೆ.

***ಈ ನಿಟ್ಟಿನಲ್ಲಿ ಪ್ರಬಲ ಅಭಿಪ್ರಾಯ ಮೂಡಿ ರಾಜ್ಯ ಸರ್ಕಾರ ವಿವಿಧ ರಾಜಕೀಯ ಪಕ್ಷಗಳು ಮತ್ತು ಬೇರೆ ಬೇರೆ ರಾಜ್ಯ ಸರ್ಕಾರಗಳ ಸಹಮತ ಪಡೆದು ಮುಂದಾಳತ್ವ ವಹಿಸಿ ಕೇಂದ್ರದೊಡನೆ ಸೂಕ್ತ ರೀತಿಯಲ್ಲಿ ವ್ಯವಹರಿಸುವುದು ಅತ್ಯಂತ ಸೂಕ್ತವಾಗಿರುತ್ತದೆ.***

**ಶಿಫಾರಸ್ಸು 25:** ರಾಗಿ, ಜೋಳಗಳಂತಹ ತೃಣ (ಸಿರಿ) ಧಾನ್ಯಗಳು ನೀಡುವ **ಬಹು ವಿಧದ ಭದ್ರತೆ** (Multiple Securities)ಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪೌಷ್ಟಿಕತೆ,

ಪರಿಸರ, ಹವಾಮಾನ ಬದಲಾವಣೆಗಳಂತಹ ಮಹತ್ವದ ಒಡಂಬಡಿಕೆಗಳಿಗೆ ಸಂಬಂಧಿಸಿರುತ್ತವೆ. ಈ ನಿಟ್ಟಿನಲ್ಲಿ ಸೂಕ್ತವಾಗಿ ಅನುಸಂಧಾನ ಮಾಡಿ ರಾಗಿ ಮತ್ತು ಜೋಳ ಬೆಳೆಯುವ ರೈತರ ಸೇವೆಗೆ ಗರಿಷ್ಠ ಪ್ರತಿಫಲ ನೇರವಾಗಿ **ಆದಾಯ ವರ್ಗಾವಣೆ** (Income Transfer) ಮೂಲಕ ಸಿಗುವಂತೆ ಮಾಡಲು ***ವರದಿ, ಕಾಯಿದೆ, ನೀತಿ, ನಿಯಮಗಳು ನಿರ್ಮಾಣವಾಗುವ ನಿಟ್ಟಿನಲ್ಲಿ ರಾಜ್ಯಸರ್ಕಾರ ಶಕ್ತಿ ಮೀರಿ ಪ್ರಯತ್ನಿಸಬೇಕು.***

**ಈ ಎಲ್ಲಾ ಶಿಫಾರಸ್ಸುಗಳ ಅನುಷ್ಠಾನಕ್ಕಾಗಿ 'ಕೃಷಿ ಬೆಲೆ ಆಯೋಗ' ಸಕ್ರಿಯವಾಗಿ ಪ್ರಯತ್ನಿಸಿ, ಈ ನಿಟ್ಟಿನಲ್ಲಿ ಎದುರಾಗುವ ಅಡ್ಡಿ, ಅಡಚಣೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದೆ ಪೂರ್ಣ ಪ್ರಮಾಣದ ವರದಿಯನ್ನು ಸಲ್ಲಿಸಲಿದೆ.**

# ಕರ್ನಾಟಕ ಕೃಷಿ ಬೆಲೆ ಆಯೋಗ

**(Karnataka Agriculture Price Commission)**

ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು 2013-14ನೇ ಸಾಲಿನ ಆಯವ್ಯಯ ಭಾಷಣದ ಪ್ರಸ್ತಾಪದನ್ವಯ, ಸರ್ಕಾರದ ಆದೇಶ ಸಂಖ್ಯೆ: ಕೃಇ61ಕೃಎಇ 2013, ಬೆಂಗಳೂರು, ದಿ: 31/01/2014 ರಂತೆ 10 ಷರತ್ತು ಮತ್ತು ನಿಬಂಧನೆ, 10 ಕರ್ತವ್ಯ ಹಾಗೂ ರಚನೆಗಳಂತೆ ಓರ್ವ ಅಧ್ಯಕ್ಷರು ಮತ್ತು ಐವರು ಸದಸ್ಯರಿರುವ 'ಕರ್ನಾಟಕ ಕೃಷಿ ಬೆಲೆ ಆಯೋಗ'ವನ್ನು ರಚಿಸಲಾಯಿತು.

## ದೃಷ್ಟಿಕೋನ:

ರೈತರಿಗೆ ಗ್ರಾಹಕರ ಬೆಲೆಯಲ್ಲಿ ಗರಿಷ್ಟ ಪಾಲು ಖಚಿತ ಪಡಿಸುವುದು, ರಾಜ್ಯದ ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧನೆ, ಆಹಾರ ಭದ್ರತಾ ಅಗತ್ಯಗಳ ಪೂರೈಕೆ, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಮತ್ತು ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವುದು ಇತ್ಯಾದಿ ಕರ್ನಾಟಕ ರಾಜ್ಯದ ಕೃಷಿ ಬೆಲೆ ಆಯೋಗದ ಮುಖ್ಯ ದೃಷ್ಟಿಕೋನವಾಗಿರುತ್ತದೆ.

## ಧ್ಯೇಯೊದ್ದೇಶಗಳು:

ಕೃಷಿ ಮಾರುಕಟ್ಟೆಯ ಮೂಲ ಸೌಕರ್ಯವನ್ನು ಉತ್ತಮಗೊಳಿಸುವುದು, ಬೆಲೆ ಮತ್ತು ಬೆಲೆಯೇತರ ಕ್ರಮಗಳಿಂದ ಮಾರುಕಟ್ಟೆ ಸ್ಥಿರೀಕರಿಸುವುದು, ಅದಿಕ ಉತ್ಪಾದನೆ ಸಮಯದಲ್ಲಿ 'ಮಾರುಕಟ್ಟೆ ಮಧ್ಯ ಪ್ರವೇಶ', ರೈತರಿಗೆ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ ಸಾಮೂಹಿಕ ಚೌಕಾಸಿ ಸಾಮರ್ಥ್ಯ (*Collective Bargaining Power*) ಹೆಚ್ಚಿಸುವುದು, ಮಾರುಕಟ್ಟೆ ಸುಧಾರಣೆ, ಬೆಳೆ ವಿಮೆ, ಇ~ವ್ಯಾಪಾರಗಳ ಮೂಲಕ ಕೃಷಿ ಸಮುದಾಯದ ಎಲ್ಲಾ ವರ್ಗ ಮತ್ತು ಪ್ರದೇಶಗಳ ರೈತರ ಹಿತ ಕಾಪಾಡುವುದು ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ.

**ವಿಳಾಸ: ಕೃಷಿ ಆಯುಕ್ತರ ಕಾರ್ಯಾಲಯದ ಆವರಣ,**

**ಶೇಷಾದ್ರಿ ರಸ್ತೆ, ಬೆಂಗಳೂರು – 560 001**

**ಫೋನ್: 080-22115496, ಇ–ಮೇಲ್: agripricecommission@gmail.com**